# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 Volume:01 • ಸಂಚಿಕೆ:287 Issue:287 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 13.04.2024 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2


## ಪ್ರಜಾಪ್ರಭುತ್ವ ಬಲಪಡಿಸಲು ಮತದಾನ ಮಾಡಿರಿ

ಮೈಕ್ರೋ ನ್ಯೂಸ್

### ಕೊಪ್ಪಳ ಲೋಕಸಭಾ ಚುನಾವಣೆ: ಮೊದಲ ದಿನ 4 ಅಭ್ಯರ್ಥಿಗಳಿಂದ 7 ನಾಮಪತ್ರಗಳ ಸಲ್ಲಿಕೆ

**ಹಂಪಿ ಟೈಮ್ಸ್ ಕೊಪ್ಪಳ**

ಲೋಕಸಭಾ ಚುನಾವಣೆ-2024 ರ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ನಲಿನ್ ಅತುಲ್ ಅವರು ನಾಮ ಪತ್ರ ಸಲ್ಲಿಕೆಯ ಮೊದಲ ದಿನವಾದ ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಭ್ಯರ್ಥಿಗಳಿಂದ ಚುನಾವಣಾ ನಾಮಪತ್ರಗಳನ್ನು ಸ್ವೀಕರಿಸಿದರು.
8-ಕೊಪ್ಪಳ ಲೋಕಸಭಾ ಕ್ಷೇತ್ರಕ್ಕೆ ನಾಮಪತ್ರ ಸಲ್ಲಿಕೆ ಏಪ್ರಿಲ್ 12 ರಂದು ಆರಂಭವಾಗಿದ್ದು, ಶುಕ್ರವಾರದಂದು ಭಾರತಿಯ ಜನತಾ ಪಾರ್ಟಿಯ ಅಭ್ಯರ್ಥಿಯಾಗಿ ಬಸವರಾಜ್ ಕ್ಯಾವಟರ್ 2 ನಾಮಪತ್ರಗಳನ್ನು, ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದ ಅಭ್ಯರ್ಥಿಯಾಗಿ ಶರಣಪ್ಪ ಅವರು 2 ನಾಮಪತ್ರಗಳನ್ನು ಹಾಗೂ ಭಾರತಿಯ ರಾಷ್ಟ್ರೀಯ ಕಾಂಗ್ರೆಸ್ (ಐ) ಪಕ್ಷದ ಅಭ್ಯರ್ಥಿಯಾಗಿ ರಾಜಶೇಖರ ಕುಯ್ಯಪ್ಪನರ ಅವರು 02 ನಾಮಪತ್ರ ಸಲ್ಲಿಸಿದರು ಹಾಗೂ ಪಕ್ಷೇತರ ಅಭ್ಯರ್ಥಿಯಾಗಿ ಮಹಿಬುಬಸಾಬ ಅವರು 01 ನಾಮಪತ್ರ ಸಲ್ಲಿಸಿದ್ದು, ಒಟ್ಟು 4 ಅಭ್ಯರ್ಥಿಗಳಿಂದ 7 ಚುನಾವಣಾ ನಾಮಪತ್ರಗಳು ಮೊದಲ ದಿನ ಸಲ್ಲಿಕೆಯಾಗಿವೆ.

# ಜೊತೆ ಜೊತೆಯಲಿ ನಾಮಪತ್ರ ಸಲ್ಲಿಕೆ

## ಬಳ್ಳಾರಿ ಲೋಕಸಭೆ ಚುನಾವಣೆ | ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್, ಬಿಜೆಪಿ ಹಾಗೂ ಪಕ್ಷೇತರ ಸೇರಿ ನಾಲ್ವರಿಂದ ಉಮೇದುವಾರಿಕೆ ಸಲ್ಲಿಕೆ

**ಹಂಪಿ ಟೈಮ್ಸ್ ಬಳ್ಳಾರಿ**

09-ಬಳ್ಳಾರಿ (ಪ.ಪಂ) ಲೋಕಸಭೆ ಸಾರ್ವತ್ರಿಕ ಚುನಾವಣೆಗೆ ಏ.12 ರಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದ್ದು, ಮೊದಲ ದಿನ 4 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.
ಮೊದಲನೇ ದಿನವಾದ ಶುಕ್ರವಾರದಂದು, ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಅಭ್ಯರ್ಥಿ ಎ.ದೇವದಾಸ್ ಅವರು 2 ನಾಮಪತ್ರ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ.ತುಕಾರಾಂ ಅವರು 3 ನಾಮಪತ್ರ, ಬಿಜೆಪಿ ಅಭ್ಯರ್ಥಿ ಶ್ರೀರಾಮಲು ಅವರು 3 ನಾಮಪತ್ರ ಮತ್ತು ಪಕ್ಷೇತರ ಅಭ್ಯರ್ಥಿ ಭಾಗ್ಯಲಕ್ಷ್ಮಿ ಅವರು 2 ನಾಮಪತ್ರ ಸೇರಿ ಒಟ್ಟು ನಾಲ್ವರು ಅಭ್ಯರ್ಥಿಗಳಿಂದ 10 ನಾಮಪತ್ರ ಸಲ್ಲಿಕೆಯಾಗಿವೆ.
ನಾಮಪತ್ರ ಸಲ್ಲಿಸಲು ಏಪ್ರಿಲ್ 19 ಕೊನೆ ದಿನವಾಗಿದ್ದು, ಏಪ್ರಿಲ್ 20 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಏಪ್ರಿಲ್ 22 ರಂದು ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನವಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

### ಮೊದಲ ದಿನ ನಾಮಪತ್ರ ಸಲ್ಲಿಕೆ

1) ಬಿಜೆಪಿ ಅಭ್ಯರ್ಥಿ ಶ್ರೀರಾಮಲು ಉಮೇದುದಾರಿಕೆ ಸಲ್ಲಿಕೆ (1ನೇ ಸೆಟ್) ಈ ವೇಳೆ ಶಾಸಕ ನೇಮಿರಾಜ್ ನಾಯ್ಕ್, ಬಿಜೆಪಿ ಕಾರ್ಯಕರ್ತೆ ಅರುಣಾ ಲಕ್ಷ್ಮಿ, ಬಿಜೆಪಿ ಮುಖಂಡ ಐಯ್ಯಾಳಿ ತಿಮ್ಮಪ್ಪ, ವಕೀಲರಾದ ಪಾಟೀಲ್ ಸಿದ್ದರೆಡ್ಡಿ ಉಪಸ್ಥಿತರಿದ್ದರು.
2) ಬಿಜೆಪಿ ಅಭ್ಯರ್ಥಿ ಶ್ರೀರಾಮಲು ಉಮೇದುದಾರಿಕೆ ಸಲ್ಲಿಕೆ (2ನೇ ಸೆಟ್) ಈ ಸಂಧರ್ಭದಲ್ಲಿ ವಿಧಾನ ಪರಿಷತ್ ಶಾಸಕ ವೈ. ಸತೀಶ್, ಮಾಜಿ ಶಾಸಕರಾದ ಆನಂದ್ ಸಿಂಗ್, ಸುರೇಶ್ ಬಾಬು, ಬಿಜೆಪಿ ಹಿರಿಯ ಮುಖಂಡ ಡಾ. ಮಣಿಪಾಲ್ ಉಪಸ್ಥಿತರಿದ್ದರು.
3) ಬಿಜೆಪಿ ಅಭ್ಯರ್ಥಿ ಶ್ರೀರಾಮಲು ಉಮೇದುದಾರಿಕೆ ಸಲ್ಲಿಕೆ (3ನೇ ಸೆಟ್) ಈ ವೇಳೆ ಮಾಜಿ ಸಂಸದ ಫಕೀರಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ನಾಯ್ಡು, ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ, ಬಿಜೆಪಿ ಮುಖಂಡ ಸಣ್ಣ ರಾಮಲಿಂಗಪ್ಪ ಉಪಸ್ಥಿತರಿದ್ದರು.
4) ಭಾಗ್ಯಲಕ್ಷ್ಮೀ ಪಕ್ಷೇತರ ಅಭ್ಯರ್ಥಿಯಾಗಿ ಉಮೇದುದಾರಿಕೆ ಸಲ್ಲಿಕೆ (1 ನೇ ಸೆಟ್) ಬಿಜೆಪಿ ಮುಖಂಡರಾದ ತಿಮ್ಮಪ್ಪ, ಬಾದಾಮಿ ಮುತ್ತಣ್ಣ, ಗುರುಲಿಂಗಪ್ಪ ಗೌಡ, ಟಿ.ಹೆಚ್ ದೀಪಾ ಸುರೇಶ್ ಬಾಬು ಉಪಸ್ಥಿತರಿದ್ದರು.
5) ಭಾಗ್ಯಲಕ್ಷ್ಮೀ ಪಕ್ಷೇತರ ಅಭ್ಯರ್ಥಿಯಾಗಿ ಉಮೇದುದಾರಿಕೆ ಸಲ್ಲಿಕೆ (2ನೇ ಸೆಟ್) ಮಾಜಿ ಶಾಸಕ ಅನಿಲ್ ಲಾಡ್, ಬಿಜೆಪಿ ಮುಖಂಡ ಸಿದ್ಧಾರ್ಥ್ ಸಿಂಗ್, ವಕೀಲರಾದ ಪಾಟೀಲ್ ಸಿದ್ಧಾರೆಡ್ಡಿ, ಬಿಜೆಪಿ ಕಾರ್ಯಕರ್ತೆ ಟಿ.ಹೆಚ್ ದೀಪಾ ಸುರೇಶ್ ಬಾಬು ಉಪಸ್ಥಿತರಿದ್ದರು.
6) ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ.ತುಕಾರಾಮ್ ಉಮೇದುದಾರಿಕೆ ಸಲ್ಲಿಕೆ ವೇಳೆ ಸಚಿವರಾದ ಜಮೀರ್ ಖಾನ್, ಸಚಿವ ನಾಗೇಂದ್ರ, ಎಂ.ಬಿ.ಪಾಟೀಲ್, ಶಾಸಕರಾದ ಜೆ. ಎನ್ ಗಣೇಶ್, ಎನ್.ಟಿ ಶ್ರೀನಿವಾಸ್, ಭರತ್ ರೆಡ್ಡಿ, ಎಚ್.ಆರ್.ಗವಿಯಪ್ಪ, ಹಾಗೂ ಮಾಜಿ ಶಾಸಕ ಭೀಮಾ ನಾಯ್ಕ್, ಮಾಜಿ ಸಚಿವ ಪಿ.ಟಿ.ಪರಮೇಶ್ವರ ನಾಯ್ಕ, ಕುರಿ ಶಿವಮೂರ್ತಿ ಇತರರು ಉಪಸ್ಥಿತರಿದ್ದರು.









ಸ್ ಯು ಸಿ ಐ (ಕಮ್ಯುನಿಸ್ಟ್) ಪಕ್ಷದಿಂದ ಎ. ದೇವದಾಸ್ ಬಳ್ಳಾರಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಾಕಾಂಕ್ಷಿಯಾಗಿ ಶುಕ್ರವಾರ ತಮ್ಮ ಉಮೇದುದಾರಿಕೆಯನ್ನು ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತಕುಮಾರ ಮಿಶ್ರಾ ಅವರಿಗೆ ಸಲ್ಲಿಸಿದರು. ಈ ವೇಳೆ ಎಸ್ ಯು ಸಿ ಐ (ಕಮ್ಯುನಿಸ್ಟ್) ಪಕ್ಷದ ಜಿಲ್ಲಾ ಕಾರ್ಯದರ್ಶಿ ರಾಧಾಕೃಷ್ಣ ಉಪಾಧ್ಯ, ಎಸ್ ಯು ಸಿ ಐ (ಕಮ್ಯುನಿಸ್ಟ್) ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಆರ್.ಸೋಮಶೇಖರ ಗೌಡ, ಡಾ.ಪ್ರಮೋದ್, ಎ. ಶಾಂತ ಅವರು ಉಪಸ್ಥಿತರಿದ್ದರು.














# S.M.Traders & Services
Authorised Distributor for ATLAS COPCO Portable Screw Air Compressors
for North Karnataka
Water Well and Non Water Well Applications

Atlas Copco



- SMALL COMPRESSORS
- MEDIUM COMPRESSORS
- LARGE COMPRESSORS
- ELECTRIC COMPRESSORS
- HOSEPIPE
- HAND-HELD TOOLS(JACKHAMMERS)
- DUST COLLECTORS
- DE-WATERING PUMPS
- SERVICE KIT & SPARE PARTS
- TAPER/IDS DRILL RODS

10% BETTER EFFICIENCY | EASY TO OPERATE | LOW SERVICE COST | LIGHTER | 0 TO 50° C | SERVICE EFFICIENCY | EXTENDED SERVICE INTERVALS | HEAVY DUTY AIR FILTER | HIGH RESELL VALUE

Grow Your Business With Us

9686663125 - 9686663132 - 9686413132

Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

## ಬೆಳಕಿನ ಹಾದಿ

### ಸಂಭ್ರಮಕ್ಕೊಂದು ಮಾರ್ಗ

ನಮ್ಮ ನಿತ್ಯದ ಯಾಂತ್ರಿಕ ಬದುಕಿನ ವರ್ತುಲದಿಂದ ಆಚೆ ಬರುವುದೇ ನಮ್ಮ ದೇಹ, ಮನಸ್ಸು ಮತ್ತು ಆತ್ಮಕ್ಕೆ ಹೊಸತನದಿಂದ ಕೂಡಿದ ಲಾಭದಾಯಕ ಅನುಭವವನ್ನು ನೀಡುವಂತದ್ದಾಗಿದೆ. ಯಾವುದೇ ರೀತಿಯ ಹೊಸ ಬಗೆಯ ಸ್ಥಳಗಳಿಗೆ ಭೇಟಿ ನೀಡುವುದು ನಮ್ಮ ಮಾನಸಿಕ ಹಾಗೂ ಭಾವನಾತ್ಮಕ ಆರೋಗ್ಯಕ್ಕೆ ಬಹಳ ಉತ್ತಮ. ಆ ಕಾರಣಕ್ಕಾಗಿಯೇ ಪ್ರಯಾಣವು ನಮ್ಮಲ್ಲಿ ಸದಾ ಸಂತೋಷ, ತೃಪ್ತಿಯನ್ನು



ಹೆಚ್ಚಿಸುತ್ತದೆ. ನಾವು ಹೊಸ ಸ್ಥಳಗಳನ್ನು ಅನ್ವೇಷಿಸುವಾಗ, ಕಲಿಯುವಾಗ ಹೊಸ ಜನರನ್ನು ಭೇಟಿಯಾಗುವಾಗ ಮತ್ತು ಹೊಸ ಅನುಭವಗಳ ಮೂಲಕ ಜೀವಿಸುವಾಗ ನಮ್ಮ ಮೆದುಳು ಸಕ್ರಿಯವಾಗಿರುತ್ತದೆ. ಪ್ರಯಾಣದೊಂದಿಗೆ ಬರುವ ಸ್ವಾತಂತ್ರ್ಯದ ಸನ್ನಿವೇಶವು ಆರೋಗ್ಯಕರ ಧನಾತ್ಮಕ ಮತ್ತು ಆಶಾವಾದಿ ಮನಸ್ಥಿತಿಯನ್ನು ಸೃಷ್ಟಿಸುತ್ತದೆ.

ನಮ್ಮ ಈ ಪಯಣದಲ್ಲಿ ಅತ್ಯಂತ ಶ್ರೀಮಂತಿಕೆಯ ಅನುಭವವೇನೆಂದರೆ ಹೊಸ ಜನರು ಮತ್ತು ಸ್ಥಳಗಳಿಗೆ ನಮ್ಮನ್ನು ನಾವು ಪರಿಚಯಿಸಿಕೊಳ್ಳುವುದರಿಂದ ಇತರ ಜೀವನ ವಿಧಾನಗಳು ಮತ್ತು ಸಂಸ್ಕೃತಿಗಳ ಬಗ್ಗೆ ನಮ್ಮ ತಿಳುವಳಿಕೆ ಹೆಚ್ಚುವುದು. ಹೀಗೆ ನಾವು ಹೊಸ ಸ್ನೇಹವನ್ನು ಸ್ಥಾಪಿಸುವ ಮೂಲಕ ನಮ್ಮಲ್ಲಿ ವಿಶಾಲವಾದ ವಿಶ್ವದೃಷ್ಟಿಕೋನವನ್ನು ಬೆಳೆಸಿಕೊಳ್ಳುತ್ತೇವೆ. ಜೊತೆಗೆ ಹೆಚ್ಚು ತಿಳುವಳಿಕೆ ಮತ್ತು ಮುಕ್ತ ಮನಸ್ಸಿನ ವ್ಯಕ್ತಿಗಳಾಗುತ್ತೇವೆ.

ಹೊಸ ಹೊಸ ಅನುಭವಗಳು ಸಾಮಾನ್ಯವಾಗಿ ನಾನಾ ರೀತಿಯ ಹೊಸ ಸವಾಲುಗಳನ್ನು ತಂದೊಡ್ಡುತ್ತವೆ. ನಗರ, ರಾಜ್ಯ, ದೇಶವನ್ನು ಅನ್ವೇಷಿಸುವುದು ಮೊದಲು ಕಠಿಣವಾದರೂ ಒಮ್ಮೆ ನಾವು ನಮ್ಮ ಆರಾಮದಾಯಕ ವಲಯದಿಂದ ಆಚೆ ಬಂದಾಗ ಮಾತ್ರ ನಮ್ಮಲ್ಲಿನ ಶಕ್ತಿ ಮತ್ತು ಸಾಮರ್ಥ್ಯಗಳ ಬಗ್ಗೆ ಹೊಸದೊಂದು ವ್ಯಾಖ್ಯಾನವನ್ನು ನೀಡುತ್ತೇವೆ. ಹಾಗೇನೆ ದೈನಂದಿನ ಚಟುವಟಿಕೆಗಳಿಗಿಂತ ವಿಭಿನ್ನವಾಗಿ ಕೆಲಸ ಮಾಡುವುದರಿಂದ ನಮ್ಮಲ್ಲಿನ ಉತ್ಪಾದಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು, ಸಮಸ್ಯೆ ಪರಿಹರಿಸುವ ಕೌಶಲ್ಯಗಳನ್ನು ಪಡೆಯಲು ಮತ್ತು ಆತ್ಮವಿಶ್ವಾಸ ಹೆಚ್ಚಿಸಲು ಸಹಾಯ ಮಾಡುತ್ತದೆ.

ನಾವು ಶಾಂತವಾಗಿ ವಿಶ್ರಾಂತಿ ಪಡೆಯುವ ಸ್ಥಳವು ಈಗಾಗಲೇ ನಮ್ಮಲ್ಲಿ ಅಡಗಿರುವ ಆಂತರಿಕ ಶಾಂತಿಯನ್ನು ಪಡೆಯಲು ಪೂರಕವಾಗಿ ಕೆಲಸ ಮಾಡುತ್ತದೆ. ಜೊತೆಗೆ ಪ್ರಕೃತಿ ನೀಡುವ ಎಲ್ಲವನ್ನು ನಾವು ಮುಕ್ತವಾಗಿ ಸ್ವೀಕರಿಸುವುದರಿಂದ ಭೂತ –ಭವಿಷ್ಯತ್ತಿನ ಚಿಂತೆಯಿಲ್ಲದೆ ಆ ಕ್ಷಣದಲ್ಲಿಯೇ ಜೀವಿಸುತ್ತೇವೆ. ಈ ರೀತಿಯಾಗಿ ನಾವು ವರ್ತಮಾನದಲ್ಲಿ ಜೀವಿಸುವುದರಿಂದ ನಮ್ಮ ದೇಹ, ಮನಸ್ಸು ಮತ್ತು ಆತ್ಮ ಪುನರ್ಬಲನಗೊಳ್ಳುತ್ತಲೇ ಸಾಗುತ್ತವೆ. ಅವಾಗ ಮಾತ್ರ ನಾವು ಜೀವಂತಿಕೆಯಿಂದಿರುವ ಅನುಭವವನ್ನು ಪಡೆಯುತ್ತೇವೆ. ಹಾಗೇನೆ ಜೀವನವು ಸಚೇತನಗೊಳ್ಳುತ್ತಲೆ ಸಂಭ್ರಮಿಸುತ್ತದೆ.

– **ಗುರು ಹಿರೇಮಠ,** ಹಗರಿಬೊಮ್ಮನಹಳ್ಳಿ

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:
Contact for EVENT COVERAGE & Advertisements in Leading News Paper
9448633038

### ಮಕ್ಕಳಿಗೆ ನಿಸರ್ಗ ಪ್ರೇಮ ಉಣಬಡಿಸುವ

# ಭೂಮಿಯೊಂದು ಮಹಾಬೀಜ

ಮಕ್ಕಳ ಪರೀಕ್ಷೆಗಳು ಮುಗಿಯುತ್ತಾ ಬಂದಿವೆ. ರಜೆಯಲ್ಲಿ ಮಕ್ಕಳಿಗೆ ಓದಿನ ರುಚಿ ಹತ್ತಿಸುವುದು ದೊಡ್ಡವರ ಜವಾಬ್ದಾರಿಯಾಗಿದೆ. ಓದು ಮಕ್ಕಳ ಬದುಕಿಗೆ ಮನೋರಂಜನೆ ಹಾಗೂ ಹೊಸ ವಿಷಯಗಳ ಜೊತೆಗೆ ಮತ್ತು ಸ್ಪೂರ್ತಿಯನ್ನು ನೀಡುವಂತಾದರೆ ಅದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೆಲವು ಮಹತ್ತರ ಪುಸ್ತಕಗಳನ್ನು ಪರಿಚಯಿಸುವ ಆಶಯದಲ್ಲಿ ಮುಂದುವರೆದ ಭಾಗವಾಗಿ ಈ ಲೇಖನ.

ಕೃಷ್ಣಮೂರ್ತಿ ಬಿಳೆಗೆರೆ ಕನ್ನಡ ಸಾಹಿತ್ಯದಲ್ಲಿ ತಮ್ಮ ವೈವಿಧ್ಯಮಯ ಬರಹಗಳ ಮುಖಾಂತರ ಗಮನ ಸೆಳೆದವರು. ವೃತ್ತಿಯಲ್ಲಿ ಕಾಲೇಜು ಪ್ರಾಂಶುಪಾಲರಾಗಿ ನಿವೃತ್ತರಾಗಿದ್ದರೂ ಪರಿಸರದ ಕುರಿತು ಹೆಚ್ಚು ಪ್ರೀತಿಯುಳ್ಳವರು. ಸಹಜ ಕೃಷಿ, ಮಳೆ ನೀರು, ಪರಿಸರ ಸಂರಕ್ಷಣೆ ಹೀಗೆ ಹತ್ತಾರು ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡುತ್ತಿದ್ದಾರೆ. ಗಾಯಗೊಂಡಿದ ಗರಿಕೆ ಗಾನ ಸೇರಿದಂತೆ ಅನೇಕ ಕಾವ್ಯ ಸಂಕಲನ ಪ್ರಕಟಿಸಿದ್ದಾರೆ. ಮಳೆಹುಚ್ಚ, ಅಂಗ ಭಂಗದ ರಾಜ್ಯದಲ್ಲಿ ಸೇರಿದಂತೆ ಗಮನ ಸೆಳೆಯುವ ನಾಟಕಗಳನ್ನು ರಚಿಸಿದ್ದಾರೆ. ಕೃಷಿ ಕುರಿತಾಗಿ ಮಳೆ ನೀರ ಕೊಡಿ, ಅನ್ನದೇವರ ಮುಂದೆ, ಬಿಸ್ಲು ಬಾಳೆ ಹಣ್ಣು ಸೇರಿದಂತೆ ಹಲವು ಉತ್ತಮ ಕೃತಿ ಹೊರತಂದಿದ್ದಾರೆ. ಮಕ್ಕಳ ಸಾಹಿತ್ಯದಲ್ಲೂ ಸೈ ಎನಿಸಿಕೊಂಡ ಕೃಷ್ಣಮೂರ್ತಿ ಬಿಳೆಗೆರೆ ಜೀರಿಂಬೆ ಹಾಡು, ಪದ್ಯದ ಮರ, ಹಾಡೆ ಸುವ್ವಿ, ಚಗಚೆ ಹೂವಿನ ಹುಡುಗಿ ಮುಂತಾದ ಕೃತಿಗಳ ಮೂಲಕ ಎಳೆಯರ ಗಮನ ಸೆಳೆದಿದ್ದಾರೆ. ಹಾಗಾಗಿ ಆರ್ಯಭಟ, ಜಿಎಸ್ಎಸ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬಾಲ ವಿಕಾಸ ಅಕಾಡೆಮಿ ಪ್ರಶಸ್ತಿಗಳು ಸಾಹಿತ್ಯ ಕೃಷಿಗೆ ಅರಸಿಬಂದಿವೆ.



ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Scan For Digital Colourful
HAMPI TIMES E-paper

ಪ್ರಸ್ತುತ ದಿನದಲ್ಲಿ ಮಕ್ಕಳ ಸಾಹಿತ್ಯ ಕೇವಲ ಪ್ರಾಸಬದ್ಧವಾಗಿದ್ದರೆ ಹೆಚ್ಚು ಗಮನ ಸೆಳೆಯುವುದಿಲ್ಲ. ಬದಲಾಗಿ ನೀತಿಯನ್ನು ಒಳಗೊಂಡು, ಸರಳವಾಗಿ, ಸಂಗೀತದ ಗುಣವನ್ನು ಮೇಳೈಸಿ, ವೈಚಾರಿಕ ಚಿಂತನೆ ಮಾಡುತ್ತಾ ಮಕ್ಕಳಲ್ಲಿ ವೈಜ್ಞಾನಿಕ ಮನೊಭಾವ ಬೆಳೆಸುವಂತಿದ್ದರೆ ಹೆಚ್ಚು ಮೌಲ್ಯ ಪಡೆಯುತ್ತದೆ. ಅಂದರೆ ಇಲ್ಲಿವರೆಗೂ ಬಹುತೇಕ ಮಕ್ಕಳ ಸಾಹಿತ್ಯ ಎಂದರೆ ಪಂಚತಂತ್ರ, ಪ್ರಾಣಿಗಳು, ಜನಪದ ಇಂತಹಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತಿತ್ತು. ಆದರೆ ಈ ಹೊಸಕಾಲದಲ್ಲಿ ಜಗತ್ತಿನ ನಡೆಯುತ್ತಿರುವ ವಾಸ್ತವದ ಸಂಗತಿಗಳನ್ನು ಮತ್ತು ಮಕ್ಕಳ ಭವಿಷ್ಯತ್ತಿಗೆ ನೆರವಾಗುವ ಅಂಶಗಳನ್ನು ಸಾಹಿತ್ಯದಲ್ಲಿ ತರಬೇಕು ಎನ್ನುವಂತವರಲ್ಲಿ ಕೃಷ್ಣಮೂರ್ತಿ ಬಿಳಿಗೆರೆಯವರೂ ಒಬ್ಬರೂ. ಅವರು ತಮ್ಮ ಎಲ್ಲಾ ಸಾಹಿತ್ಯದಲ್ಲಿ ಮಕ್ಕಳಿಗೆ ಪರಿಸರದ ಕುರಿತು ಕಾಳಜಿ ಮೂಡಿಸವುದರ ಜೊತೆಗೆ ಅದರ ಮಹತ್ವವನ್ನು ಮನನ ಮಾಡಿಸುತ್ತಿದ್ದಾರೆ. ಅಂತಹ ಕೃತಿಗಳಲ್ಲಿ 'ಭೂಮಿಯೊಂದು ಮಹಾಬೀಜ' ಕೃತಿಯಲ್ಲಿ ಎಳೆಯರಿಗೆ ಪರಿಸರ ಪ್ರೇಮವನ್ನು ಮೂಡಿಸುವಂತಹ 50 ಪದ್ಯಗಳನ್ನು ಕಾಣುತ್ತೇವೆ.




ಪರಿಸರದ ಪ್ರತಿ ಅಂಶವೂ ತನ್ನದೇ ಆದ ಮಹತ್ವವನ್ನು ಹೊಂದಿದೆ. ಈ ಅಂಶದ ಆಶಯದಲ್ಲಿಯೇ ಜೀವಿಯ ಉಗಮ ಮತ್ತು ಬೆಳವಣಿಗೆ ಕುರಿತು ಅವರ ಪದ್ಯಗಳಲ್ಲಿ ಪ್ರಸ್ತಾಪವಾಗುತ್ತದೆ. ಕಲ್ಪನೆಗಿಂದ ವಾಸ್ತವತೆ ಬಹಳ ಮುಖ್ಯ ಎಂದು ನಂಬಿರುವ ಬಿಳಿಗೆರೆ ಅವರು ಆ ನಿಟ್ಟಿನಲ್ಲಿ ಮಕ್ಕಳಿಗೆ ಪದ್ಯಗಳನ್ನು ಕಟ್ಟಿಕೊಟ್ಟಿದ್ದಾರೆ. ಅವರಿಗೆ ನೀರು, ಮಣ್ಣು, ಹಣ್ಣು, ಬೀಜ, ಹಕ್ಕಿ, ಆಕಾಶ, ಕೆರೆಕಟ್ಟೆ, ದನಕರು ಹೀಗೆ ಎಲ್ಲವೂ ಪರಿಸರ ಮಾತೆಯ ಕೊಡುಗೆಗಳಾಗಿ ಕಾಣಿಸುತ್ತವೆ. ಅವುಗಳ ಬಗ್ಗೆ ಮಕ್ಕಳು ತಿಳಿಯಬೇಕು ಎನ್ನುವುದರ ಜೊತೆಗೆ ಆ ನಿಟ್ಟಿನಲ್ಲಿ ಚರ್ಚೆಗಳನ್ನು ಹುಟ್ಟುಹಾಕುವ ಅವರ ಪ್ರಯತ್ನ ನಿಜಕ್ಕೂ ಶ್ಲಾಘನೀಯ. ಪರಿಸರವನ್ನು ನಾವು ಬಳಸೋಣ ಜೊತೆಗೆ ಎಷ್ಟು ಬಳಸುತ್ತೆವೆಯೋ ಅಷ್ಟನ್ನು ಮತ್ತೆ ಬೆಳೆಸಬೇಕು ಎನ್ನುವ ಅವರ ತತ್ವ ಹೆಚ್ಚಿನ ಪದ್ಯಗಳಲ್ಲಿ ಪ್ರತಿಫನವಾಗುತ್ತದೆ.

ಮಕ್ಕಳ ಮುಗ್ಧ ಮನಸ್ಸು ಪರಿಸರವನ್ನು ತಮಗಿಂತ ಭಿನ್ನವಾಗಿ ಕಾಣುವುದಿಲ್ಲ. ಅದಕ್ಕೆ 'ಮಳೇಲಿ ನೆನೆಯೋಣ ಬಾರೆ' ಪದ್ಯದಲ್ಲಿ "ಮಳೇಲಿ ನೆಂದು ಮೊಳಕೆ ಬಂದು, ಮರ ಆಗೋಣ ಬಾರೆ, ಕಲ್ಲಿನಂತ ಹೂವು ಬಿಟ್ಟು, ಕಾಯಿ ಬಿಡೋಣ ಬಾರೆ" ಎನ್ನುವ ಸಾಲುಗಳು ಪ್ರಕೃತಿಯ ಸತ್ಯವನ್ನು ಎತ್ತಿ ತೋರಿಸುತ್ತಾ, ಮರ ಬೇರೆ ಅಲ್ಲ–ತಾವು ಬೇರೆ ಅಲ್ಲ ಎನ್ನುವ ಸಂದೇಶವನ್ನು ಮಕ್ಕಳಲ್ಲಿ ಬಿತ್ತುತ್ತಾರೆ. ವಿಪರೀತ ನಗರೀಕರಣದಿಂದ ನಮ್ಮ ಹೊಟ್ಟೆ ತುಂಬಲು ಸಾಧ್ಯವಿಲ್ಲ. ಗ್ರಾಮೀಣ ಕೃಷಿಗೆ ಹೆಚ್ಚು ಆದ್ಯತೆ ನೀಡಬೇಕು ಎನ್ನುವುದನ್ನು 'ನಗರದ ಎತ್ತರ ಎಷ್ಟೆ ಆದರೂ' ಪದ್ಯದಲ್ಲಿ "ಕಂಪ್ಯೂಟರ್ ಸಿಂಪ್ಯೂಟರ್, ಎಷ್ಟೆ ಕಿಂಟಲ್ ಮಾಡಿದರೂನು, ರಾಗಿ ಕಾಳು ಉದುರೋದಿಲ್ಲ, ಬೇಳೆಕಾಳು ಬೇಯೋದಿಲ್ಲ" ಎನ್ನುವುದು ಸತ್ಯದ ಮಾತಾಗಿದೆ. ಇದರ ಜೊತೆಗೆ ನಾವುಗಳು ಇತ್ತೀಚೆಗೆ ಕರೋನ ಸಮಯದಲ್ಲಿ ಎದುರಿಸಿದ ಸವಾಲು ನೆನಪಾಗುತ್ತದೆ. ಮನುಷ್ಯನ ಬಳಿ ಎಷ್ಟೆ ಹಣವಿದ್ದರೂ ಅದು ಬಹಳ ಮುಖ್ಯವಾದ ಸಮಯದಲ್ಲಿ ಉಪಯೋಗಕ್ಕೆ ಬರುವುದಿಲ್ಲ ಎಂಬುದು ನಮಗೆಲ್ಲಾ ಕಳೆದ ಕೆಲ ತಿಂಗಳಲ್ಲಿ ಅನುಭವವಾಗಿದೆ. ಅದನ್ನೆ ಇವರು ಅದೇ ಪದ್ಯದ ಕೊನೆಗೆ "ಎಷ್ಟೇ ನೋಟು ಎಣಿಸಿದರು, ಖಂಡಿತ ಹೊಟ್ಟೆ ತುಂಬಲ್ಲ, ಚಿನ್ನದ ಬಿಸ್ಕೆಟ್ ಜೇಬಲ್ಲಿದ್ದರು, ಖಂಡಿತ ತಿನ್ನೋಕಾಗಲ್ಲ" ಎನ್ನುವುದು ಮಕ್ಕಳಾದಿಯಾಗಿ ಎಲ್ಲರನ್ನೂ ಸದಾ ಯೋಚಿಸುವಂತೆ ಮಾಡುತ್ತದೆ.

ಜಲ ಸಂರಕ್ಷಣೆ ಕುರಿತು ಉದ್ದುದ್ದ ಭಾಷಣ ಮಾಡಿದರೆ ಅದು ಮಕ್ಕಳ ಮನಸ್ಸಿಗೆ ನಾಟುವುದು ತುಂಬಾ ಕಡಿಮೆ. ಆದರೆ ಕವನಗಳ ಮುಖಾಂತರ ಅದನ್ನು ತಲುಪಿಸಿದಲ್ಲಿ ಹೆಚ್ಚು ಪರಿಣಾಮ ಕಾಣಬಹುದು. ಅದಕ್ಕೆ ಕೃಷ್ಣಮೂರ್ತಿ ಬಿಳೆಗೆರೆ 'ಮಳೆ ನೀರು ಅಮೃತ' ಪದ್ಯದಲ್ಲಿ "ಮಳೆಯ ನೀರ ಹಿಡಿಯೋಣ, ಹೊಟ್ಟೆ ತುಂಬ ಕುಡಿಯೋಣ, ಜಲದೇವತೆಯ ಬೆಲೆಯ ಅರಿತು, ತುಪ್ಪದಂತೆ ಬಳಸೋಣ" ನಾಲ್ಕು ಸಾಲಿನಲ್ಲಿ ನಾವು ಮುಂದೆ ಇಡಬೇಕಾದ ಹೆಜ್ಜೆಯನ್ನು ಸ್ಪಷ್ಟ ಪಡಿಸುತ್ತಾರೆ. ಮರಗಳ ಕುರಿತು ಮಕ್ಕಳ ಒಲವು ಮೂಡಿಸಿಕೊಳ್ಳಲು 'ಪುಟ್ಟ ಗಿಡವ ನೆಟ್ಟ ದಿನ' ಪದ್ಯದಲ್ಲಿ " ಒಂದು ಗಿಡ ಎರಡಾಗಿ, ಎರಡು ಗಿಡ ನಾಲ್ಕಾಗಿ, ಮರವೆ ಹಸಿರ ಊರು, ಊರು ಹಕ್ಕಿ ತೇರು" ಎಂದು ಹಸಿರ ಕುರಿತು ಸಾರುವ ರೀತಿ ವಿಭಿನ್ನವಾಗಿದೆ. ಮತ್ತೊಂದೆಡೆ "ಹಣ್ಣು ಕಿತ್ತು ತಿಮ್ಮ, ಬೀಜ ನೆಲಕೆ ಊರೋ ತಮ್ಮ" ಎಂದರೆ ಒಂದು ಹಣ್ಣು ಮರದಿಂದ ತಿಂದರೆ, ಅದರ ಬೀಜವನ್ನು ನೆಟ್ಟು, ಮತ್ತೊಂದು ಗಿಡವನ್ನು ಬೆಳೆಸು ಎನ್ನುವ ಸಂದೇಶ ಎಷ್ಟು ಸುಂದರವಾಗಿದೆ.

ಮತ್ತೊಂದೆಡೆ, ಮಕ್ಕಳು ಪಾಲಕರನ್ನು ಪ್ರಶ್ನೆ ಮಾಡುತ್ತಾ 'ಹೊಸ ಪುಸ್ತಕ ತಂದು ಕೊಡಿ' ಪದ್ಯದಲ್ಲಿ "ಓದು ಓದು ಬರೀ ಬರೀ ಎಂದಷ್ಟೇ ಕೂಗಬೇಡಿ, ಓದುತೀವಿ ಬರೆಯುತೀವಿ ಹೊಸ ಪುಸ್ತಕ ತಂದು ಕೊಡಿ, ನಿಮಗೆ ನೀವು ಕೊಂಡು ತಂದ ಪುಸ್ತಕಗಳ ಲೆಕ್ಕಕೊಡಿ" ಎಂದು ಕೇಳುವ ಹಂತಕ್ಕೆ ಮಕ್ಕಳು ಬೆಳೆದರೆ ಪುಸ್ತಕ ಸಂಸ್ಕೃತಿಗೆ ಮತ್ತೆ ವೈಭವದ ಕಾಲ ಮರುಕಳಿಸುವುದರಲ್ಲಿ ಅನುಮಾನವೇ ಇಲ್ಲ. ಇಂತಹ ಮಹತ್ವದ ಅಂಶಗಳ ಜೊತೆಗೆ ನೀರು, ಮರ, ಮಳೆ, ಪಕ್ಷಿ, ಪ್ರಾಣಿಗಳ ಕುರಿತಾದ ಅನೇಕ ಪದ್ಯಗಳು ಈ ಪುಸ್ತಕದಲ್ಲಿವೆ.

ಕೃತಿಯಲ್ಲಿನ ಪದ್ಯಗಳು ಪುಟ್ಟ ಮಕ್ಕಳ ಭವ್ಯ ಭವಿಷ್ಯತ್ತಿಗೆ ಬಯಸುವ ಕರ್ತವ್ಯದಂತಿರದೆ, ಒಳಗಿನ ಕಳಕಳಿ, ಮಕ್ಕಳ ಭವಿಷ್ಯವನ್ನ ದೂರದ ಕಣ್ಣಿಂದ ನೋಡುವ ಆಕಾಂಕ್ಷೆಗಳಂತೆ ಅವು ಗೋಚರಿಸುತ್ತವೆ. ಆ ಮೂಲಕ ಅವು ಪರಿಸರದಲ್ಲಿನ ಮಹತ್ತರವಾದ ಅಂಶಗಳಾದ ನೀರು, ಮರ, ಮಳೆ, ಪಕ್ಷಿ, ಪ್ರಾಣಿಗಳ ಕುರಿತಾಗಿ ಗಮನ ಸೆಳೆಯುತ್ತವೆ. ನಾಗರೀಕತೆಯ ನಾಜೂಕಿಗಿಂತ ಪ್ರಕೃತಿ ಸಾನಿಧ್ಯಕ್ಕೆ ಹಿಂತಿರುಗುವ ಆಸೆ ಮನುಕುಲದ ಗಾಢ ಹಂಬಲಗಳಲ್ಲೊಂದು ಎನ್ನುವಂತೆ ಇಲ್ಲಿನ ಪದ್ಯಗಳನ್ನು ಗಮನಿಸಿದಾಗ ಸೂಕ್ಷ್ಮವಾಗಿ ಅರಿವಿಗೆ ಬರುತ್ತದೆ.

ಕೃಷ್ಣಮೂರ್ತಿ ಬಿಳೆಗೆರೆ ಆರಂಭದಲ್ಲಿ ಮಕ್ಕಳಿಗೆ ಹೇಳುವಂತೆ 'ಹಾಡು ದೊಡ್ಡದು, ಬದುಕು ಚಿಕ್ಕದು. ನಿಮ್ಮ ಫಲವತ್ತಾದ ಮನಸ್ಸಿನ ಮಣ್ಣಿನಲ್ಲಿ, ಈ ಹಾಡುಗಳು ಚಿಗುರಿ ಬಳ್ಳಿಯಾಗಿ ಹಬ್ಬಿ, ಹಣ್ಣು ಕಾಯಿ ಬಿಡಲಿ, ಲೋಕ ಅವುಗಳನ್ನು ಬೀಜ ಮಾಡಿಕೊಂಡು ಬೆಳೆದು ಸಂತಸ ಪಡಲಿ' ಎನ್ನುವ ಮಾತುಗಳು ಪ್ರತಿ ಪದ್ಯದಲ್ಲಿಯೂ ಪ್ರತಿಧ್ವನಿಯಾಗುತ್ತವೆ.

'ಭೂಮಿಯೊಂದು ಮಹಾಬೀಜ' ಕೃತಿಯ ಪದ್ಯಗಳಲ್ಲಿ ಪ್ರಕೃತಿಯಲ್ಲಿನ ಸೋಜಿಗದ ಸಂಗತಿಗಳನ್ನು ಹೊರಗೆ ತರುತ್ತಾ, ತಿಳುವಳಿಕೆಯ ಮಾತುಗಳಂತೆ ಕಾಣುತ್ತಾ, ಪ್ರಕೃತಿಯ ವ್ಯಾಪ್ತಿಯನ್ನು ಹಿಗ್ಗಿಸಿದಂತೆ ಕಾಣುತ್ತವೆ.

ಇದು ಉಪದೇಶದ ಕೃತಿಯಲ್ಲ. ಇದೊಂದು ಬಗೆಯ ಕಳಕಳಿಯ, ಎಚ್ಚರ ವಹಿಸಬೇಕಾಗಿರುವ ಪರಿಯದು, ಬದುಕನ್ನು ಸಹಜವಾಗಿ ಪ್ರಕೃತಿಯ ನಡುವೆ ರೂಪಿಸಿ ಉಳಿಸಿಕೊಳ್ಳುವುದರ ತುಡಿತ ತುಂಬಿದ ಅಂಸಫಲನ್ನು ಒಳಗೊಂಡ ಹೊತ್ತಿಗೆ. ಪದ್ಯಗಳ ಮೂಲಕ ಮನುಷ್ಯ ಬದುಕನ್ನೆಲ್ಲ ವ್ಯಾಪಿಸಿಕೊಳ್ಳುವ ಹಂಬಲ ಇಲ್ಲಿ ಗುರುತಿಸಬಹುದು. ಆ ಬಯಕೆಯಲ್ಲಿ ಮಕ್ಕಳ ಮನಸ್ಸನ್ನು ಗಟ್ಟಿಗೊಳಿಸುವ "ಗುಡ್ಡವನ್ನು ಕಾಯುತೀವಿ, ಕಾಡುಗುಡ್ಡ ಮಾಡುತೀವಿ" ಎನ್ನುತ್ತ ಶಪಥವನ್ನೇ ತೊಡುವಂತ ಸಾಲುಗಳು ಮಕ್ಕಳ ದೃಷ್ಟಿಯಲ್ಲಿ ಪರಿಸರ ಪ್ರಜ್ಞೆ ಮೂಡಿಸುವಲ್ಲಿ ನೆರವಾಗುತ್ತವೆ.

# ರೊಕ್ಕ ನೀವೊಂದೇ ನೋಡೀರೇನು?

ಅತ್ತು ರೂಪಾಯ್ಕ ಏಟು ಎಣ್ಣೆ ಅಂತ ಆಕಾಮು, ಆಗ ಬರ್ತಿತ್ತು, ಈಗ ಬರಾಣಿಲ್ಲ. ನಿಮ್ಮ ಅವ್ವ ಏಳೋಗು,ಇಕಾ ನಿನ್ ಅತ್ರೂಪಾಯಿ" ಅಂಗಡಿ ಅಜ್ಜಿ ಅತ್ರುಪಾಯೀನ ಶ್ರವಂತಿ ಕೈಗಿಕ್ಕಿತು
ಪಾಪ ಮಗೀಗೆ ಏನು ಗೊತ್ತು
"ಎವ್ ಬೇ, ಇದೊಂದು ಸಾರಿ ಆಕು ಬೇ, ಅತ್ರೂಪಾಯ್ಕ ಬಂದೋಟು ಆಕು ಎಣ್ಣಿ, ಮನೀಗೆ ನೆಂಟ್ರು ಬಂದಾರಾ" ಮಗೀ ಅಂಗಲಾಚಿತು.
"ಎವ್ ಎವ್ವೀ ನಿನ್ ಮನೀಗೆ ನೆಂಟ್ರು ಬಂದ್ರೆ ನಾ ಏನ್ ಮಾಡ್ಲಿ ಸುಂದ್ರೀ. ನಿನಗ ಅತ್ರೂಪಾಯ್ಕ ಎಣ್ಣಿ ಹೊಯ್ದು ಹಳ್ಳ ಇಡಿದು ಓಗಾಮೇನು. ಬರಾಣಿಲ್ಲ, ಸುಮ್ನೆ ಓಯ್ತಾ ಇರು" ಅಂಗಡಿ ಅಜ್ಜಿ ವಠಾರಕ್ಕೆ ಕೇಳೂವಂಗ ಒದರಿತು..
"ಮೆಲ್ಕ ಏಳು ಬೇ ಎವ್ವಾ ಯಾಕ ಒದರ್ಯಾಡ್ತೀದೀ, ಜನ ನೋಡ್ತಾರಾ" ಶ್ರವಂತಿ ಅಂಗಡಿ ಅಜ್ಜಿಗೆ ಮೆಲು ದನಿಯಲ್ಲಿ ಮನವಿ ಮಾಡಿದಳು..
"ಕಾಸಿಲ್ಲದವ್ಕ ರಗೂಡ ಮರುವಾದಿ, ನಡೀ ಅತ್ಲಾಗೆ" ಅಂಗಡಿ ಅಜ್ಜಿ ಗದರಿತು..
ಶ್ರವಂತಿಗೆ ದುಃಖ ಮಡುಗಟ್ಟಿತು..ಅಳುವ ಹಾಗೂ ಇಲ್ಲ, ನೇರ ಗುಡ್ಲು ದಾರಿ ಹಿಡಿದು ಹೆಜ್ಜೆ ಹಾಕಿತು. ಕೈಯಾಗ ಹುರಿ ಕಟ್ಟಿದ ಖಾಲಿ ಎಣ್ಣೀ ಸೀಸೆ ನೇತಾಡ್ತಿತ್ತು..



ಮಹಿಮ
ಲೇಖಕರು, ರಾಯಚೂರು

Scan For Digital Colourful
HAMPI TIMES E-paper

ಈಗ ಎಡ್ಡ ತಿಂಗ್ಳ ಹಿಂದೆ ಇದೇ ಅಂಗಡಿ ಅಜ್ಜಿ ಸೀಸದಾಗ ಇದಾ ಅತ್ತು ರೂಪಾಯ್ಕ ಎಣ್ಣಿ ಹೊಯ್ದಿತ್ತು.. ಈಗ ಬರಾಣಿಲ್ಲ ಅಂತು.
ಶ್ರವಂತಿ ಏಳನೇ ತ ಓದೋ ಹುಡುಗಿ..ತಲೀಬಗ್ಗಿಸಿಕೊಂಡು ಓಗಿ ತಲೀ ಬಗ್ಗಿಸಿಕೊಂಡು ಬರಬೇಕು ಅನ್ನೋ ಅಮ್ಮನ ಮಾತಿನಂಗ ತಲಿ ಬಗ್ಗಿಸಿಕೊಂಡು ಗುಡಿಸಲ ಕಡಿ ಓಗುವಾಗ ಅದಾ ಅಂಗಡಿ ಅಜ್ಜಿ ಮೊಮ್ಮಗ ಸೀನ್ಯಾ
"ನಾ ಅಂಗಡ್ಯಾಗ ಇದ್ದಾಗ ಬರಬಾರದೇನಾ, ಸೀಸದ ತುಂಬಾ ಸುಮ್ನ ಎಣ್ಣೆ ಒಯ್ದು ಕಳಿಸತಿದ್ನ್ಯ" ಅಂತ ಒಂದ ನಮೂನಿ ರಾಗ ಎಳೆದ. ಶ್ರವಂತಿ ಅವನ ಕಡಿ ತಿರುಗಿಯೂ ನೋಡ್ಲಿಲ್ಲ.. ಸೀದಾ ಗುಡಿಸಲ ಹೊರಗ ಎಣ್ಣೀ ಸೀಸ ಇಟ್ಟು ಒಳಗ ಓಗಿ ಅವ್ವನ ಕಿವ್ಯಾಗ ಎಣ್ಣೀ ಬರಂಗಿಲ್ಲ ಅನ್ನೋ ಮಾತು ಹೇಳಿತು
ಬಂದ ನೆಂಟ್ರು ಆ ಹುಡುಗೀನ ಕರದು ಎಷ್ಟನೇ ತ ಅಂತ ಕೇಳಿದರು..
ನಾ ಏಳ್ನೇ ತ ರೀ ಅಂತು ಶ್ರವಂತಿ, ಶ್ರವಂತಿ ಅವ್ವ ಹೊರಗ ಬಂದು ಸೀಸ ತಗೊಂಡು ಅಜ್ಜಿ ಅಂಗಡಿ ಕಡೆ ಹೊರಟಾಗ ಶ್ರವಂತಿ ಅಂಗಡಿ ಹುಡುಗ ಅಂದಿದ್ದು ಅವ್ವನ ಕಿವ್ಯಾಗ ಹೇಳಿ ಎವ್ವಾ ಆ ಅಜ್ಜಿ ಎಣ್ಣೀ ಬರಂಗಿಲ್ಲ ಅಂತು ನೀನು ಮತ್ತೆ ಯಾಕ ಒಂಟಿ ಅಂದ್ಲು...
ಇಲ್ಲವ್ವಾ, ಹನುಮಪ್ಪಣ್ಣ ಕಳೆ ತಗದ ದುಡ್ಡು ಬಾಕಿ ಉಳಿಸ್ಯಾನ ಅದನ್ನು ಕೇಳಿ ಎಣ್ಣಿ ಕಿರಾಣಿ ತರ್ತೀನಿ ಅಂತು...
ಅನುಮಪ್ಪನ ಮನಿಗೆ ಓಗಿ ಎಣ್ಣಾ ಅನುಮಪ್ಪಣ್ಣ ಅಂತ ಕೂಗಿ ಕರೆದಳು ಮಾಳವ್ವ..
"ನಿಮ್ ಅನುಮಪ್ಪಣ್ಣ ಈಸ್ವರ ಗುಡಿ ಕಟ್ಟೀ ಮ್ಯಾಗ ಕುಂತೀರ್ತಾನ ಅಲ್ಲಿ ಓಗಿ ಕೇಳು "ಅಂತ ಹನುಮಪ್ಪನ ಎಂಡ್ರು ಮನಿ ಒಳಗಿಂದ ಒದರಿದಳು. ಈಸ್ವರ ಗುಡಿ ಕಡೆ ಹೊರಟಳು ಶ್ರವಂತಿ ಅವ್ವ ಮಾಳವ್ವ .ಕೈಯಾಗ ಎಣ್ಣೀ ಸೀಸ.. ಈಸ್ವರ ಗುಡಿ ಕಟ್ಟೀ ಮ್ಯಾಗ ಭರ್ಜರಿ ಇಸ್ಪೀಟು ನಡೆದಿತ್ತು..ಸಿಕ್ಕಾಬಟ್ಟೆ ಜನ..ಅನುಮಪ್ಪಣ್ಣ ಅಲ್ಲಿ ಕಾಣಸವಲ್ಲ..

"ಅಣ್ಣಾ, ಅನುಮಪ್ಪಣ್ಣ ಎಲ್ಲಿ ಅದಾನ? "ಮಾಳವ್ವ ಕೇಳಿದಳು..
"ಅಕಾ ಅಲ್ಲಿ ಕುಡದ ಬಿದ್ದಾನ ನೋಡು" ಅಂತ ಅದ್ರಾಗ ಒಬ್ಬಾವ ಕೈ ಮಾಡಿ ತೋರಿಸಿ ನಕ್ಕ..
"ಬಿಟ್ಟಿ ಬ್ರಾಂದಿ ಕುಡದು ಎಂಗ ಬಿದ್ದಾನ ನೋಡಬೇ "ಅಂತ ಇನ್ನೊಬ್ಬಾವ ನಕ್ಕ...ಮಾಳವ್ವಗ ದುಕ್ಕ ಉಕ್ಕಿ ಬಂತು. .ಅನುಮಪ್ಪಣ್ಣ ಎಚ್ರ ಇಲ್ಲದಂಗ ಬಿದ್ದಾನ
ಅಷ್ಟರಾಗ ಒಂದು ಜೀಪು ಬಂತು. ಇಸ್ಪೀಟು ಆಡಾ ಜನ ಎದ್ದು ಓಡಿದ್ರು.. ಜೀಪಿನ್ಯಾಗಿಂದ ಒಬ್ಬೊಬ್ರಿಗೆ ಒಂದು ಬ್ರಾಂದಿ ಬಾಟಲ್ ತಗದು ತಗದು ಕೊಟ್ರು..
"ಬೇ ತಂಗಿ, ನೀನು ಒಂದು ಬಾಟಲ್ ಇಸ್ಗ "ಅಂತ ಅದ್ರಾಗ ಒಬ್ಬ ಅಂದು ಕಿಸಕ್ಕನೇ ನಕ್ಕ.. "ಏನಣ್ಣ ಅದು" ಮಾಳವ್ವ ಕೇಳಿದಳು..
"ಎಣ್ಣೀ ಕಣವ್ವಾ"., ಅಂದ ಜೀಪಿನವ..
"ಅಣ್ಣಾ ನನಗೊಂದು ಎಣ್ಣೀ ಸೀಸ ಕೊಡಣ್ಣೋ" ಮಾಳವ್ವ ಕೇಳಿದಳು..
"ಇದು ಎಣ್ಣೀ ಅಂದ್ರ ಕುಡೀಯೋದಬೇ"..ಅಂದ ಜೀಪಿನವ..
"ಥೂ..ಅದಕ ಎಣ್ಣೀ ಅಂತಾರೇನೋ ಎಣ್ಣಾ".. ಅಂದ್ಲು..
"ಇದಾ ಎಣ್ಣೀ ಕುಡದು ಎಂಗ್ ಬಿದ್ದಾನ ನೋಡು ಅನುಮಪ್ಪ" ಅಂತ ಎಲ್ರೂ ನಕ್ರು..
ಮಾಳವ್ವ ಅಂಗಡಿ ಕಡೆ ನಡೆದಳು..
ಅಲ್ಲಿ ಒಂದು ಗುಂಪು ಎದುರಿಗೆ ಬಂತು..ಅದ್ರಾಗ ಒಬ್ಬಾವ ವಾರ್ಡ್ ನಂಬರ್ ಎಂಟು ಮಾಳವ್ವ ಗಂಡ ಪತ್ರಿ ಬಸವ 33 ನಂಬರ್ ಅಂದ..



"ಬೇ ಮಾಳವ್ವ ನೀನಾ ಏನು "ಅಂದ ಅದ್ರಾಗಿನ ಒಬ್ಬ..
"ಔದೆಣ್ಣಾ "ಅಂದ್ಲು
"ಮಾಳವ್ವ..ನೋಡಬೇ, ನಮಗಾ ಓಟು ಆಕಬೇಕು ಇಕಾ ಐನೂರು, ಇಕಾ ನಮ್ಮ ಪಕ್ಷದ ಗುರ್ತು ಜೀಪು...ಗೊತ್ತಾತಿಲ್ಲ. ಮಿಷನ್ ದಾಗ ಜೀಪಿಗೆ ಒತ್ ಬೇಕು "
"ಒತ್ತಾಕ ಐನೂರಾ ಅಣ್ಣಾ" ಅಂದ್ಲು ಮಾಳವ್ವ..
"ಅಕಾ, ಅಲ್ಲಿ ನೋಡಬೇ, ಅಣ್ಣ ಬಂದ ನೋಡು ಅವರೇ ಎಲೆಕ್ಷನ್ ದಾಗ ನಿಂತಿರೋರು..."
ಅಣ್ಣ ಹತ್ತಾರು ಜನರ ದಂಡಿನೊಂದಿಗೆ ಬಂದು ಮಾಳವ್ವನ ನೋಡಿದ
"ಲೇ ಇವ್ನ ಈಯಮ್ಮಗ ದುಡ್ಡು ಮುಟ್ಟ್ಯಾವಿಲ್ಲ, ಮುಟ್ಟ್ಯಾವಿಲ್ಲೋ ತಂಗಿ" ಅಣ್ಣ ಕೇಳಿದ
"ಎಪ್ಪಾ, ಎಣ್ಣೀ ರೇಟು ಕಂಡಾಬಟ್ಟೆ ಆಗೇದ. ಅದನ್ನ ಇಳಿಸಿಬಿಡೋ ನನ್ ತಂದಿ.. ಕಾಳು ಕಡಿ ಕೊಮ್ಮಂಗಿಲ್ಲ, ಎಲ್ಲಾ ಕಂಡಾಬಟ್ಟೆ ರೊಕ್ಕ ಆಗ್ಯಾವ, ನಮ್ಮಂತ ಬಡ್ರು ಎಂಗ ಬದುಕೋದು ಎಣ್ಣಾ" ಕೈ ಮುಗಿದು ಕೇಳಿದಳು ಮಾಳವ್ವ..
"ಲೇ, ಈಯಮ್ಮಗ ಇನ್ನೂ ಒಂದ್ನೈನೂರು ಜಾಸ್ತಿ ಕೊಡು" ಅಣ್ಣ ತಮ್ಮಗೋಳಿಗೆ ಆಜ್ಞೆ ಮಾಡಿ ಹೊರಟ..
ತಮ್ಮಗೋಳು ಒಟ್ಟು ಸಾವ್ರ ಮಾಳವ್ವನ ಕೈಯಾಗಿಟ್ಟು "ನಡೀಬೇ, ದೊಡ್ಡವರನ್ನ ಕಂಡ್ ಕಂಡಲ್ಲಿ ಇಂಗೆಲ್ಲಾ ಕೇಳಬಾರ್ದು" ಅದರಲ್ಲೊಬ್ಬ ಗದರಿದ..
"ಎಣ್ಣಾ, ನಮಗ ಬಾನಕ್ಕ ಗತಿ ಇಲ್ಲ ಆಟೇ.. ಮಾನ ಮರ್ವಾದಿ ಇನ್ನೂ ಉಳಿಸಿಗೆಂಡೀವಿ ಎಣ್ಣಾ, ರೊಕ್ಕ ನೀವೊಂದೇ ನೋಡೀರೇನು.ಜಗತ್ತು ಕೊಂಡೀರೇನು" ಗಟ್ಟಿಯಾಗಿ ಕಿರುಚಿದಳು ಮಾಳವ್ವ..
ಮಾಳವ್ವ ತನ್ನ ಕೈಗೆ ತುರುಕಿದ ಐನೂರರ ಎರಡು ನೋಟುಗಳನ್ನು ಅವನ ಕೈಗೇ ವಾಪಸ್ ತುರುಕಿ ಅಜ್ಜಿ ಅಂಗಡಿಗೆ ಹತ್ತು ರೂಪಾಯಕ ಬಂದಷ್ಟು ಬರ್ಲಿ ಅಂತ ಎಣ್ಣೀ ತರಾಕ ಹೆಜ್ಜೆ ಹಾಕಿದ್ಲು...

- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers

9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.


ಕವಿ ಮನಸು

## ಅವ್ವನ ಉಗಾದಿ



ನೋಡಕ್ ಅವ್ವ ಶರಣೆ
ಆದರೆ ಒಂದೀಟ್ ಬ್ಯಾರೆ
ಉಗಾದಿ ಅಂದ್ರು, ಯಾಕಿದ್ದೀತೇಳಂತ
ನಸುಕೀಲೇ ಎದ್ದು ನಿದ್ದೇಲಿರೊ ಮಕ್ಕು
ಮರೀನ ಹಾಸೀದ ಕೌದಿನೇ ಮಗುಚಿ ಮೈ
ಮೇಲೆಳೆದು ಮಾಯವಾದ್ರೆ .
ಮಲಗಿದ ಮಕ್ಕು ಹಾಸ್ಗೇಲಿ ಮಿಸ್ಕಾಡುತ್ಲೇ
ಎಂಟಾಣೆ ಕೂಲಿ ತರಾಕಿ

ನೋಡಾಕ್ ಅವ್ವ ಜಂಗಮ ರೂಪಿ
ಅದರಾಗ ಒಂದೀಟು ಬ್ಯಾರಿಲ್ಲ
ತನಿಗೊತ್ತಿರೋ ಇದ್ಯಾನೆಲ್ಲಾ
ಹಂಚುತ್ಲೇ ಬೆಳೆದಾಕಿ

ಅವ್ವ ನೋಡಾಕ್ ಮಹಾ ದಾಸೋಹಿ
ಆದ್ರ ಆಕಿ ಸಂಸಾರನೇ ಆಕಿಗೆ ಮಹಾಮನಿ
ಮಕ್ಕಳೇ ಆಕೆಯ ಆತ್ಮ ಲಿಂಗ
ಆವುಗಳ ಉದರ ಪೋಷಣೆಯೆ ಆಕೆಯ
ಮಹಾ ದಾಸೋಹ

ಉಳ್ಳವರ ಉಗಾದಿ ಊರೊಳಗ ಇಲ್ಲದ
ಸಡಗರವ ಅರಸಿದಂತಲ್ಲ
ಅವ್ವ ಕಾಯಕ ಯೋಗಿನಿ
ಪ್ರಕೃತಿಯ ಹಸಿರ ಮಡಲಲೇ
ಇಡಿ ದಿನದ ಗೇಯ್ಮೆ
ಪಾಲ್ಗುಣ ಚೈತ್ರದ
ಸಂಕೀರಣ ಕೋಗಿಲೆ ಆಕಿ

– ಭಾರತಿ ಅಶೋಕ್.

## ವಸಂತ



ವಸಂತನ ಆಗಮನ
ಕೋಗಿಲೆಯ ಸವಿಗಾನ
ಒಡೆದಿದೆ ಮಾವಿನ ಚಿಗುರು
ಎಲ್ಲೆಲ್ಲೂ ಹಚ್ಚ ಹಸಿರು
ಹೂ ರಾಶಿಯ ಅಂದ
ಹೊರಸೂಸುವುದು ಸುಗಂಧ
ದುಂಬಿಗಳು ಹೀರುವವವು ಮಕರಂದ
ತರುವುದು ಹೊಸತನದ ಆನಂದ

– ಚೇತನ ಭಾರ್ಗವ


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.


ಇಂದು ದೇವರ ದಾಸಿಮಯ್ಯನವರ ಜಯಂತಿ ...

# ಜೀವನ ಸಾರ್ಥಕತೆಗೆ ದಾಸಿಮಯ್ಯನ ಚಿಂತನೆಗಳು

ಮನುಷ್ಯ ಬದುಕು ಸಂಕಟಕ್ಕೆ ಸಿಲುಕಿದ ಸಂಕೀರ್ಣ, ಸಂದಿಗ್ಧ ಕಾಲಘಟ್ಟವಿದು. ಜಾತಿ ಮತ ಪಂಥ ಪಂಗಡ ದೇವರು ಧರ್ಮ ಮೂಢನಂಬಿಕೆ ಲಿಂಗತಾರತಮ್ಯ ಕೋಮುವಾದ ಇತ್ಯಾದಿ ಜೀವವಿರೋಧಿ ಸಂಗತಿಗಳು ಅಂತರಂಗ ಮತ್ತು ಬಹಿರಂಗಗಳನ್ನು ತೀವ್ರವಾಗಿ ಬಾಧಿಸುತ್ತಿವೆ. ಈ ಜಾಡ್ಯಗಳು ಮನುಕುಲದ ಬಾಳನ್ನು ಸೀಳುತ್ತಿವೆ. ವ್ಯಷ್ಟಿ ಮತ್ತು ಸಮಷ್ಟಿಗಳ ನಡುವೆ ಸಮನ್ವಯ ಸಾಧ್ಯವಾಗಬೇಕಾದರೆ ಅಂತರಾಳ ಶುದ್ಧಗೊಳ್ಳಬೇಕು. ಆ ಮೂಲಕ ಸಾಮಾಜಿಕ ಸ್ವಾಸ್ಥ್ಯವೂ ಸಾಕಾರಗೊಳ್ಳುತ್ತದೆ. ಇದಕ್ಕೆ ವೈಚಾರಿಕ ತಿಳಿವಳಿಕೆ ಅತ್ಯವಶ್ಯ. ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿಗೆ ತುಡಿಯುವುದರ ಮೂಲಕ ಸಮಸ್ತ ಜೀವಸಂಕುಲದ ಬಾಳನ್ನು ಕಟ್ಟಲು ಶ್ರಮಿಸಿದ ಸಂತರಲ್ಲಿ ಆದ್ಯ ವಚನಕಾರ ದೇವರ ದಾಸಿಮಯ್ಯನವರಿಗೆ ವಿಶೇಷ ಸ್ಥಾನವಿದೆ. ಅವರ ಚಿಂತನೆಗಳು ವಿಚಾರಪ್ರಚೋದಕವಾಗಿದ್ದು, ಮೌಲಿಕವಾಗಿವೆ. ಮನುಷ್ಯ ತನ್ನ ಬಾಳನ್ನು ಸಾರ್ಥಕಪಡಿಸಿಕೊಳ್ಳಲು ಅನುಸರಿಸಬೇಕಾದ ಮಾರ್ಗಗಳೇನು ? ಈ ಬಗ್ಗೆ ದೇವರ ದಾಸಿಮಯ್ಯನವರು ಬೋಧೆ ಮಾಡಿರುವುದನ್ನು ಗಮನಿಸಬೇಕಾಗುತ್ತದೆ. ಮನಸ್ಸೆಂಬ ಮರ್ಕಟವನ್ನು ಅಂಕೆಯಿಲ್ಲಿಟ್ಟುಕೊಂಡು ಇಂದ್ರಿಯನಿಗ್ರಹ ಮಾಡಿಕೊಂಡಾಗ ಮಾತ್ರ ಮೂಲಕ ಯೋಜಿತ ಗುರಿ ಸಾಧಿಸಲು ಸಾಧ್ಯ. ಈ ಹಿನ್ನೆಲೆಯಲ್ಲಿ ದಾಸಿಮಯ್ಯನವರು;

"ತನು ತನ್ನ ದೆಸೆಯಲೇಸು ದಿನವಿದ್ದಡೇನು
ತನ್ನ ಮನ ಹರಿದತ್ತ ಹರಿದ ಬಳಿಕ?
ಕೆನೆಯಿರದ ಮೊಸರ ಕಡೆದರೆ ಅಲ್ಲಿ
ಒಂದು ಹನಿ ತುಪ್ಪವಿಲ್ಲ –ಕಾಣಾ ರಾಮನಾಥ" ಎಂದಿದ್ದಾರೆ.



ಡಾ. ಸಂಗಮೇಶ ಎಸ್. ಗಣಿ
ಲೇಖಕರು: 9743171324
Scan For Digital Colourful
HAMPI TIMES E-paper

ಮನಸ್ಸು ಎಲ್ಲೆಂದರಲ್ಲಿ ಹರಿಯುತ್ತಿದ್ದರೆ, ದೇಹ ತನ್ನ ನಿಯಂತ್ರಣದಲ್ಲಿ ಎಷ್ಟು ದಿವಸಗಳಿದ್ದರೂ ಪ್ರಯೋಜನವಿಲ್ಲ. ಹೀಗಾಗಿ 'ದೇಹ'ವೆಂಬ ಮೊಸರನ್ನು ಕಡೆದರೆ ಮನಸ್ಸೆಂಬ 'ಕೆನೆ'ಗಟ್ಟಬೇಕು. ಇಲ್ಲದಿದ್ದರೆ ಬಾಳು ಕೆಟ್ಟು ಹೋಗುತ್ತದೆ. ಮನಸ್ಸು ಕೆನೆಗಟ್ಟಿದರೆ ಮಾತ್ರ ತಿಳಿವಳಿಕೆಯ 'ತುಪ್ಪ' ದೊರಕುತ್ತದೆ ಎಂಬುದನ್ನು ಮಾರ್ಮಿಕವಾಗಿ ಹೇಳಿರುವ ದಾಸಿಮಯ್ಯ. ದೇಹ ಮತ್ತು ಮನಸ್ಸುಗಳು ಪರಸ್ಪರ ಸಮನ್ವಯಗೊಳ್ಳುವ ಸೂತ್ರವನ್ನು ಉಪಮೆಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಡಾಂಭಿಕತೆ ಮನುಷ್ಯನ ದೌರ್ಬಲ್ಯಗಳಲ್ಲಿ ಒಂದು. ನಿಜಮುಖ ಮರೆಮಾಡಿ ಬದುಕುವುದರಲ್ಲಿ ಅವನಿಗೆ ಸುಖ. ಈ ಭ್ರಮೆಯ ಸುಖದಲ್ಲಿ ಮೈಮರೆಯುವ ಮಾನವನ ನಡೆನುಡಿ ಬಗೆಗಿನ ಅರಿವಿಗೆ ಮರೆವು ಆವರಿಸಿಕೊಂಡಿರುತ್ತದೆ. ಈ ಪೊರೆ ಕಳಚಿಕೊಳ್ಳುವುದು ಅವಶ್ಯ; ಈ ಹಿನ್ನೆಲೆಯಲ್ಲಿ;

"ಹಂದಿ ಶ್ರೀಗಂಧದ ಪೂಸಿದಡೇನು ಗಂಧರಾಜನಾಗಬಲ್ಲುದೆ?
ನವಿಲು ನಲಿಯಿತ್ತೆಂದಡೆ ಕಾಕೋಳಿ ಪುಚ್ಚವ ತರಕೊಂಡಂತೆ
ಕರ್ಮಿಗಳ ಭಕ್ತಿ !
ಹೊರವೇಷದ ವಿಭೂತಿರುದ್ರಾಕ್ಷಿಯ ಪೂಸಿದಡೇನು ?
ತೆರನನರಿದು, ಮರವೆಯ ಕಳೆದು
ಮಾತಿನಂತೆ ನೀತಿಯುಳ್ಳಡೆ
ಅವರನಜಾತರೆಂಬೆ–ರಾಮನಾಥ" ಎಂದು ಹೇಳುವ ದಾಸಿಮಯ್ಯನವರು ಹಂದಿಯ ಮೈಗೆ ಗಂಧ ಸವರಿದರೆ ಅದು ಸುಗಂಧರಾಜನಾಗಲು ಸಾಧ್ಯವೆ? ಪುಕ್ಕವೇ ಇಲ್ಲದ ಕಾಡುಕೋಳಿ ನವಿಲನ್ನು ಅನುಕರಿಸಿ ಕುಣಿದಂತೆ ಕಾಪುರುಷರು ವಿಭೂತಿ ರುದ್ರಾಕ್ಷಿಗಳನ್ನು ಧರಿಸಿಕೊಂಡ ಮಾತ್ರಕ್ಕೆ ನಿಜ ಭಕ್ತರಾಗಲು ಸಾಧ್ಯವೇ? ಪರಮಾತ್ಮನ ರೀತಿ ಮತ್ತು ಜೀವನ ನೀತಿಯನ್ನು ತಿಳಿದು ನಡೆಯಬೇಕು. ಅಜ್ಞಾನ ಕಳೆದು, ಸುಜ್ಞಾನದಿಂದ ನಡೆ–ನುಡಿಗಳನೊಂದು ಮಾಡಿ ನಡೆದುಕೊಳ್ಳುವವರಿಗೆ ರುದ್ರಾಕ್ಷಿ ವಿಭೂತಿಗಳು ಶೋಭೆ. ಇಲ್ಲದವರಿಗೆ ಅವಲಕ್ಷಣ ಎಂಬುದನ್ನು ತಿಳಿಸಿದ್ದಾರೆ.



ಅಲ್ಲದೆ, ಉಪದೇಶ ಮಾಡುತ್ತ ಮಾನವೀಯತೆ ಮರೆತು ಮೃಗನಂತೆ ವರ್ತಿಸುವ ಇಂದಿನ ಕೆಲ ಢೋಂಗಿ ಪುರುಷರ ನಡೆ ಪ್ರಶ್ನಾರ್ಹವೇ. ದಾಸಿಮಯ್ಯನವರು ಆ ಕಾಲದಲ್ಲೇ ಇಂಥ ಮಾನವಶೋಷಕರ ವಿರುದ್ಧ ಧ್ವನಿಯೆತ್ತಿದ್ದಾರೆ.

"ಮಂಡೆಯಂ ಬೋಳಿಸಿಕೊಂಡು
ನುಡಿದು ಗೋಷ್ಠಿಯ ಕಟ್ಟಿದಡೇನು
ಕಂಡಕಂಡವರಿಗೆ ಕೈಯೊಡ್ಡಿ ಬೇಡುವ
ಭಂಡರನೊಲ್ಲ–ರಾಮನಾಥ" ಮಾನವ ದೌರ್ಬಲ್ಯವನ್ನೇ ಅಸ್ತ್ರವನ್ನಾಗಿ ಮಾಡಿಕೊಂಡು ಶೋಷಣೆ ನಡೆಸುವ ಭಂಡರನ್ನು ಎಂದಿಗೂ ನಂಬುವುದು ತರವಲ್ಲ. ತಲೆಬೋಳಿಸಿಕೊಂಡು, ವಿಭೂತಿ ರುದ್ರಾಕ್ಷಿ ಮಾಲೆ ಧರಿಸಿಕೊಂಡು ಕಾಲಿಗೆ ಬೀಳುವವರ ತಲೆಮೇಲೆ ಕತ್ತರಿಯಿಟ್ಟು ಅವರ ತಲೆಬೋಳಿಸುವ ಮೂಲಕ ಹೊಟ್ಟೆಹೊರೆದುಕೊಳ್ಳುವ ಹೀನಮಾರ್ಗಿಗಳನ್ನು ದಾಸಿಮಯ್ಯನವರು ಧಿಕ್ಕರಿಸುತ್ತಾರೆ. ದೂರವಿಡುತ್ತಾರೆ. ಇಂಥವರ ಬಗ್ಗೆ ಎಚ್ಚರದಿಂದ ಇರುವಂತೆಯೂ ತಿಳಿಸುತ್ತಾರೆ.

ಈ ಜೀವನದಲ್ಲಿ ಏನನ್ನು ಉಣ್ಣಬೇಕು ಏನನ್ನು ಉಣ್ಣಬಾರದು ಎಂಬ ಅರಿವಿರಬೇಕು. ಆದರೆ ಧನದಾಹಿ ಮನುಷ್ಯ ಮಾತ್ರ ತನ್ನ ಸ್ವಾರ್ಥಕ್ಕೆ ಎಲ್ಲವನ್ನೂ ಭೋಗಿಸುತ್ತಿದ್ದಾನೆ.

"ಉಣ್ಣೆ ಕೆಚ್ಚಲ ಹತ್ತಿ ಉಂಬುದೇ ನೊರೆವಾಲ?
ಪುಣ್ಯಕ್ಷೇತ್ರದಲ್ಲಿ ಹುಟ್ಟಿ ಉಣ್ಣದವನು
ಆ ಉಣ್ಣೆಯಿಂದ ಕರಕಷ್ಟ ರಾಮನಾಥ" ಭವಿಯ ಬದುಕು ಬರೀ ಬೋಗಿಸಲು ಬಂದಿಲ್ಲ. ಅಮೃತವೆನ್ನಬಹುದಾದ ಹಾಲನ್ನು ಉಣ್ಣಲು ಅರಿಯದ ಉಣ್ಣೆ ಉಣ್ಣುವುದು ರಕ್ತವನ್ನು. ರಕ್ತಪಾನ ಕ್ರೀಡೆಯನ್ನಾಡುತ್ತಲೇ ಮರಣಿಸುವ ನಿರ್ದಯಿ ಜಂತು ಉಣ್ಣೆಯಂತೆ ನರನೂ ಬೇಡವಾದದ್ದನ್ನೂ ಭೋಗಿಸುತ್ತ ನಡೆದಿರುವುದು ಅಪಾಯಕಾರಿಯೂ ಆತಂಕಕಾರಿಯೂ ಆಗಿದೆ. ಹೀಗಾಗಿ ನರನ ಬಾಳು ಉಣ್ಣೆಗಿಂತಲೂ ಕನಿಷ್ಠವಾಗಿದ್ದು, ಕೀಳಾಗಿದೆ. ಇಂದಿನ ಭೋಗಸಂಸ್ಕೃತಿ ಕುರಿತು ವಿವೇಚಿಸುವಂತೆ ಪ್ರೇರೇಪಿಸುತ್ತದೆ ದಾಸಿಮಯ್ಯನವರ ಈ ವಚನ.

ಜೀವನದಲ್ಲಿ ಬಂದೊದಗುವ ಕಷ್ಟಕಾರ್ಪಣ್ಯಗಳನ್ನು ಧೈರ್ಯದಿಂದ ಎದುರಿಸಬೇಕು. ನರನು ನಾರಾಯಣನಾಗಲು ಜೀವನವಿಡೀ ಹೆಣಗಾಡುತ್ತಾನೆ.

"ತೀವಿ ಕುಳ್ಳಿರ್ದ ಸಭೆಯೀಯಬಲ್ಲುದೇ ದಾನವ
ಸಾವರೆ ಸಂಗ್ರಾಮಕ್ಕೆ ಹೋದವರೆಲ್ಲ ?
ಈವಡೆ ನೂರಕ್ಕೊಬ್ಬ ಸಹಸ್ರಕೊಬ್ಬ !
ಹುಣಸೆಯ ಹೂವೆಲ್ಲ ಕಾಯಾಗಬಲ್ಲುದೇ ರಾಮನಾಥ' ದಾನದ ಮಹಿಮೆ ಕುರಿತು ಚರ್ಚಿಸುವ ಸಭೆಯಲ್ಲಿ ಪಾಲ್ಗೊಂಡವರೆಲ್ಲಾ ಮಹಾದಾನಿಗಳಾಗಿರಲು ಸಾಧ್ಯವೇ ? ಎಂದು ಪ್ರಶ್ನಿಸುವ ದಾಸಿಮಯ್ಯನವರು, ಯುದ್ಧಭೂಮಿಗೆ ಹೋದವರೆಲ್ಲ ಹೋರಾಡಿ ಮಡಿವರೆ ? ಇಲ್ಲ, ಹೇಡಿಗಳಂತೆ ಹಿಂತಿರುಗುವವರೂ ಇರುತ್ತಾರೆ ಎಂಬುದನ್ನು ಮನವರಿಕೆ ಮಾಡಿಕೊಡುತ್ತಾರೆ. ಕಷ್ಟದಲ್ಲಿರುವವರಿಗೆ ಕೊಟ್ಟು ಕಾಪಾಡಬಲ್ಲವರು ನೂರಕ್ಕೊಬ್ಬ ಸಾವಿರಕ್ಕೊಬ್ಬರು ಮಾತ್ರ ಸಿಗಬಲ್ಲರು. ಹುಣಸೆಯ ಮರದ ಎಲೆಎಲೆಗಳಲ್ಲಿ ಬಿಡುವ ಹೂ ಎಲ್ಲವೂ ಕಾಯಿಯಾಗುವುದಿಲ್ಲ. ಬದಲಾಗಿ ಗೊಬ್ಬರವೂ ಆಗುತ್ತದೆ. ಅದರಂತೆ ಹೀನ ಬಾಳು ನಿರರ್ಥಕವಾದುದು ಎಂಬ ಸತ್ಯವನ್ನು ಅರುಹುತ್ತಾರೆ.

ಜೀವಾತ್ಮ ಪರಮಾತ್ಮನನ್ನು ಅರಿತು ಜೀವನ್ಮುಕ್ತಿಯನ್ನು ಹೊಂದಲು ಗುರು ಅರಿವಿನ ರೂಪದಲ್ಲಿ ಬಂದು ನೆರವಾಗಬೇಕು. ಅರಿತವರು ಅರಿಯದವರಿಗೆ ಅರಿವು ಮೂಡಿಸುವುದು ಅಗತ್ಯ. ಗುರು–ಶಿಷ್ಯ ಸಂವಿಧಾನದ ಮುಖ್ಯ ಗುರಿ ಅರಿವಿನ ಅನುಸಂಧಾನ. ಇಂದಿನ ದಿನಗಳಲ್ಲಿ ಅರಿತವರೂ ವಿರಳ. ಅರಿಯಬೇಕೆಂಬ ಅರಿವು ಇರುವವರೂ ವಿರಳ.

"ಹೊಲಬನರಿಯದ ಗುರು ಸುಲಭವಲ್ಲದ ಶಿಷ್ಯ
ಕೆಲಬಲನ ನೋಡದುಪದೇಶ ಅಂಧಕನು
ಕಳನ ಹೊಕ್ಕಂತೆ ರಾಮನಾಥ" ದಾಸಿಮಯ್ಯನವರ ಪ್ರಕೃತ ವಚನವು ಈ ಕಾಲದ ಗುರು–ಶಿಷ್ಯ ಸ್ವರೂಪವನ್ನು ನಿರ್ವಚಿಸುತ್ತದೆ. ತಿಳಿದವನು ಬೋಧನೆಗೆ ಅರ್ಹ. ತಿಳಿಯದವನು ತಿಳಿಯಲು ಯೋಗ್ಯ. ತಿಳಿದವನಿಗೆ ತಿಳಿಸುವ ದಾರಿ ತಿಳಿದಿರಬೇಕು. ಅರಿಯದವನಿಗೆ ಅರಿಯುವ ಗುರಿಯಿರಬೇಕು. ಆದರೆ ಇಂದು ಗುರುವಾದವರು ಜ್ಞಾನಾಂಧರಾಗಿದ್ದು, ಬೋಧಿಸುವ ಮಾರ್ಗಗಳು ಗೊತ್ತಿಲ್ಲ. ಶಿಷ್ಯರಾದವರು ಅಷ್ಟೇ. ಹೀಗಿರುವಾಗ ಇವರೀರ್ವರ ವ್ಯವಹಾರ ಕುರುಡ ಕುರುಕ್ಷೇತ್ರದಲ್ಲಿ ಕೈಯಿಲ್ಲದವನಿಗೆ ಸಾರಥಿಯಾದಂತೆ ನಿರರ್ಥಕ ಎಂಬುದನ್ನು ದಾಸಿಮಯ್ಯ ಇಂದಿನ ಶಿಕ್ಷಣ ವ್ಯವಸ್ಥೆಯನ್ನು ವ್ಯಂಗ್ಯವಾಗಿ ಹೇಳುತ್ತಿರುವಂತಿದೆ. ಚಿಂತನೆಯ ಬೀಜಗಳನ್ನು ಮಾನವನೆದೆಯಲ್ಲಿ ಬಿತ್ತಿ ಜ್ಞಾನದ ಫಲವುಣ್ಣುವಂತೆ ಮಾಡುವ ದಾಸಿಮಯ್ಯನ ವಚನಗಳು ಬಾಳಿಗೆ ಬೆಳಕಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಅತ್ಯವಶ್ಯವಾಗಿದೆ.

## ಏ.16, ಬಳ್ಳಾರಿ ಗ್ರಾಮೀಣದಲ್ಲಿ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ 110 ಕೆ.ವಿ ಮೋಕಾ–ಮೀನಹಳ್ಳಿ ಮಾರ್ಗದಲ್ಲಿ ಲಿಲೋ ನಿರ್ಮಾಣ ಕಾರ್ಯವನ್ನು ತುರ್ತಾಗಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಏ.16 ರಂದು ಬೆಳಿಗ್ಗೆ 7 ರಿಂದ ಸಂಜೆ 6 ರ ವರೆಗೆ ಗ್ರಾಮೀಣ ಪ್ರದೇಶಗಳ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ಗ್ರಾಮೀಣ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಮೋಹನ್ ಬಾಬು ತಿಳಿಸಿದ್ದಾರೆ.

**ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:** 110/11 ಕೆ.ವಿ ವಿದ್ಯುತ್ ಉಪ–ಕೇಂದ್ರ ಮೋಕಾ ಮಾರ್ಗದ ಮೋಕಾ ಉಪ–ಕೇಂದ್ರದಿಂದ ಹೊರಡುವ ಎಲ್ಲಾ 11 ಕೆ.ವಿ ವಿದ್ಯುತ್ ಮಾರ್ಗಗಳು, 110/11 ಕೆ.ವಿ ವಿದ್ಯುತ್ ಉಪ–ಕೇಂದ್ರ ಮೀನಹಳ್ಳಿ ಮಾರ್ಗದ ಮೀನಹಳ್ಳಿ ಉಪ–ಕೇಂದ್ರದಿಂದ ಹೊರಡುವ ಎಲ್ಲಾ ಕೆ.ವಿ ವಿದ್ಯುತ್ ಮಾರ್ಗಗಳು, 33/11 ವಿದ್ಯುತ್ ಉಪ–ಕೇಂದ್ರ ಯರ್ರಗುಡಿ ಮಾರ್ಗದ ಯರ್ರಗುಡಿ ಉಪ–ಕೇಂದ್ರದಿಂದ ಹೊರಡುವ ಎಲ್ಲಾ 11.ಕೆ.ವಿ ವಿದ್ಯುತ್ ಮಾರ್ಗಗಳು, ಸೇರಿದಂತೆ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

## ಏ.29 ರಂದು ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮವನ್ನು ಏ.29 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಬಳ್ಳಾರಿ ತಾಲ್ಲೂಕಿನ ಸಿಡಗಿನಮೋಳ ಬಳಿಯ ಬಸಾಯಿ ಸ್ಟೀಲ್ಸ್ ಲಿಮಿಟೆಡ್‌ನಲ್ಲಿ ಏರ್ಪಡಿಸಲಾಗಿದೆ ಎಂದು ಪ್ರಾದೇಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ತಿಳಿಸಿದ್ದಾರೆ.

ಕಾರ್ಮಿಕರ, ಪಿಂಚಣಿದಾರರ, ಮತ್ತು ಉದ್ಯೋಗದಾತರರ ಕುಂದು ಕೊರತೆ ಪರಿಹಾರ, ಮಾಹಿತಿ ವಿನಿಮಯ ಮಾಡಿ ಕೊಳ್ಳಬಹುದು. ಉದ್ಯೋಗ ದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ, ಉದ್ಯೋಗ ದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆ ದಾರರಿಗೆ ಲಭ್ಯವಿರುವ ಆನ್‌ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಮಾಹಿತಿ ಒದಗಿಸುವುದಾಗಿದೆ. ಕಾರ್ಮಿಕರು, ಪಿಂಚಣಿದಾರರು, ಉದ್ಯೋಗದಾತರು ಏ.29 ರಂದು ನಡೆಯುವ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಂ ಯೋಗಪಡೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

## ನರೇಗಾ ಕಾಮಗಾರಿ ಸ್ಥಳದಲ್ಲಿ ಮತದಾನ ಜಾಗೃತಿ




**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಲೋಕಸಭಾ ಚುನಾವಣೆಗೆ ಮೇ 07 ರಂದು ಮತದಾನ ನಡೆಯಲಿದ್ದು, ಅಂದು ನಡೆಯುವ ಪ್ರಜಾಪ್ರಭುತ್ವ ಹಬ್ಬದಲ್ಲಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಂಡು ಕಡ್ಡಾಯವಾಗಿ ಮತದಾನ ಮಾಡಬೇಕು ಎಂದು ಭೈರದೇವನಹಳ್ಳಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ವೀರಾರೆಡ್ಡಿ ಅವರು ಹೇಳಿದರು.

ಲೋಕಸಭಾ ಸಾರ್ವತ್ರಿಕ ಚುನಾವಣೆ ನಿಮಿತ್ತ ಇಂದು, ಬಳ್ಳಾರಿ ತಾಲ್ಲೂಕಿನ ಭೈರದೇವನಹಳ್ಳಿ ಗ್ರಾಮದಲ್ಲಿ ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಮತ್ತು ತಾಲ್ಲೂಕು ಆಡಳಿತ ಇವರ ಸಂಯುಕ್ತಾಶ್ರಯದಲ್ಲಿ ಭೈರದೇವನಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ನರೇಗಾ ಕಾಮಗಾರಿ ಸ್ಥಳದಲ್ಲಿ ಸ್ವೀಪ್ ಜಾಗೃತಿ ಹಾಗೂ ವಲಸೆ ಯಾಕ್ರಿ ನಿಮ್ಮೂರಲ್ಲೆ ಉದ್ಯೋಗ ಖಾತ್ರಿ ಅಭಿಯಾನದಲ್ಲಿ ಮಾತನಾಡಿದರು. ಮೇ 7 ರಂದು ಜರುಗುವ ಚುನಾವಣೆಯಲ್ಲಿ ಕಡ್ಡಾಯ ವಾಗಿ ಮತಗಟ್ಟೆ ಕೇಂದ್ರಕ್ಕೆ ಹೋಗಿ ಮತ ಚಲಾಯಿಸಬೇಕು. ಭೈರದೇವನಹಳ್ಳಿ ಗ್ರಾಮದಲ್ಲಿ ಅತಿಹೆಚ್ಚು ಮತದಾನ ವಾಗುವಂತೆ ನರೇಗಾ ಕೂಲಿಕಾರರು ಕೈಜೋಡಿಸಬೇಕು ಎಂದರು.

ವಲಸೆ ಯಾಕ್ರಿ ನಿಮ್ಮೂರಲ್ಲೆ ಉದ್ಯೋಗ ಖಾತ್ರಿ ಅಭಿಯಾನ ಆರಂಭವಾಗಿದ್ದು, ನರೇಗಾ ಕೆಲಸಕ್ಕೆ ಕಲ್ಲೂರ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು. ವೈಯಕ್ತಿಕ ಕಾಮಗಾರಿಗಳನ್ನು ಮಾಡಿ ಕೊಳ್ಳುವ ಮೂಲಕ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ವೇಳೆ ಭೈರದೇವನಹಳ್ಳಿ ಗ್ರಾಪಂ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತಾ.ಪಂ ಐಇಸಿ ಸಂಯೋಜಕರು. ಬಿಎಫ್‌ಟಿ, ಕೂಲಿಕಾರರು ಇತರರು ಹಾಜರಿದ್ದರು.






ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ
Organic Coconut & Banana, Moringa oleifera Available in best Price
98458 65204 ಮೃತ್ಯುಂಜಯನಗರ, ಹೊಸಪೇಟೆ

# ಏ.15 ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಉತ್ತರ ಪತ್ರಿಕೆಗಳ ಮೌಲ್ಯ ಮಾಪನ

## ಮೌಲ್ಯಮಾಪನ ಕೇಂದ್ರಗಳ ಸುತ್ತ 200 ಮೀ ವ್ಯಾಪ್ತಿ ನಿಷೇಧಾಜ್ಞೆ ಜಾರಿ: ಡಿಸಿ ಮಿಶ್ರಾ

■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಒಟ್ಟು 06 ಕೇಂದ್ರಗಳಲ್ಲಿ ಏ.15 ರಿಂದ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ವತಿಯಿಂದ 2024ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ-1ರ, ಉತ್ತರ ಪತ್ರಿಕೆಗಳ ಮೌಲ್ಯ ಮಾಪನ ನಡೆಯಲಿದ್ದು, ಮೌಲ್ಯಮಾಪನದಲ್ಲಿ ಅವ್ಯವಹಾರಗಳನ್ನು ತಡೆಗಟ್ಟಲು ಮೌಲ್ಯ ಮಾಪನ ಕೇಂದ್ರಗಳ ಸುತ್ತಲೂ 1973ರ ಕಲಂ 144ರಲ್ಲಿನ ಪ್ರದತ್ತವಾದ ಅಧಿಕಾರ ಚಲಾಯಿಸಿ 200 ಮೀಟರ್ ಆವರಣವನ್ನು ನಿರ್ಭಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಯೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಮೌಲ್ಯಮಾಪನ ಪಾವಿತ್ರ್ಯತೆ ಕಾಪಾಡುವ ಮೌಲ್ಯಮಾಪನ ಕೇಂದ್ರಗಳಿಗೆ ಬಾಹ್ಯ ಮತ್ತು ಅನ್ಯ ವ್ಯಕ್ತಿಗಳು ಮತ್ತು ಪ್ರಚಾರಕ್ಕಾಗಿ ಬರುವ ಜನಪ್ರತಿನಿಧಿಗಳ ಪ್ರವೇಶವನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಚುನಾವಣಾ ಸಮಯವಾಗಿರುವುದರಿಂದ, ವಿವಿಧ ಪಕ್ಷಗಳ ಜನಪ್ರತಿನಿಧಿಗಳು, ರಾಜಕೀಯ ವ್ಯಕ್ತಿಗಳು, ಮೌಲ್ಯಮಾಪನ ಕೇಂದ್ರಕ್ಕೆ ಭೇಟಿ ನೀಡುವ ಸಂಭವವಿರುವುದರಿಂದ, ರಾಜಕೀಯ ವ್ಯಕ್ತಿಗಳು ಮೌಲ್ಯಮಾಪನ ಕೇಂದ್ರಕ್ಕೆ ಭೇಟಿ ನೀಡುವುದನ್ನು ನಿಟ್ಟಿನಲ್ಲಿ ಕಡ್ಡಾಯವಾಗಿ ನಿಷೇಧಿಸಿದೆ.



ಮೌಲ್ಯಮಾಪನ ಕೇಂದ್ರದ 200 ಮೀಟರ್ ಸುತ್ತ ನಿಷೇಧಿತ ಪ್ರದೇಶವಾಗಿರುವುದರಿಂದ ಯಾವುದೇ ರಾಜಕೀಯ ಪಕ್ಷಕ್ಕಾಗಲಿ ಅಥವಾ ಯಾವುದೇ ಸಂಘಟನೆಯಲ್ಲಿನ ವ್ಯಕ್ತಿಗಳು ಅಥವಾ ಯಾವುದೇ ಅನ್ಯವ್ಯಕ್ತಿಗಳು ಮೌಲ್ಯಮಾಪನ ಕೇಂದ್ರವನ್ನು ಪ್ರವೇಶಿಸುವುದು ನಿಷೇಧಿಸಲಾಗಿದೆ.

**ಮೌಲ್ಯಮಾಪನ ಕೇಂದ್ರಗಳು:**

ಬಳ್ಳಾರಿಯ ವೈ.ನಾಗೇಶ ಶಾಸ್ತ್ರಿ ನಗರದ ಶೆಟ್ಟರ ಗುರುಶಾಂತಪ್ಪ ಪ್ರೌಢಶಾಲೆ, ಗಾಂಧಿನಗರದ ವಿವೇಕಾನಂದ ಇಂಗ್ಲೀಷ್ ಮಾಧ್ಯಮ ಪ್ರೌಢಶಾಲೆ, ಅನಂತಪುರ ರಸ್ತೆಯ ಶಾಂತಿನಿಕೇತನ ಇಂಗ್ಲೀಷ್ ಮಾಧ್ಯಮ ಶಾಲೆ, ಕೌಲ್‌ಬಜಾರ್‌ನ ಸೆಂಟ್ ಜೋಸೆಫ್ ಬಾಲಕರ ಪ್ರೌಢಶಾಲೆ, ಕಂಟೋನ್‌ಮೆಂಟ್‌ನ ನಂದಿ ಪ್ರೌಢಶಾಲೆ ಮತ್ತು ಕೌಲ್‌ಬಜಾರ್‌ನ ಸೆಂಟ್ ಜೋಸೆಫ್ ಬಾಲಕಿಯರ ಪ್ರೌಢಶಾಲೆ.

ಈ ಆದೇಶವು ಎಸ್.ಎಸ್.ಎಲ್.ಸಿ ಪರೀಕ್ಷೆ-1ರ ಮೌಲ್ಯ ಮಾಪನ ಕಾರ್ಯ ನಿರ್ವಹಿಸುವ ಸಿಬ್ಬಂದಿಯವರೆಗೆ ಅನ್ವಯಿಸುವುದಿಲ್ಲ ಎಂದು ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

# ಮಕ್ಕಳಿಗೆ ಸಕಾಲದಲ್ಲಿ ದಡಾರ ಲಸಿಕೆ ಹಾಕಿಸಿ

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಹೇಳಿಕೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಮಾರ್ಬಿಲೀ ವೈರಸ್ ಪ್ರಭೇದದ ರುಬೆಲ್ಲಾ ವೈರಸ್‌ನಿಂದ ಹರಡುವ ದಡಾರ ವೈರಾಣುವಿನ ಸೋಂಕು ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿದೆ ಯಾದರೂ ಹದಿಹರೆಯ ದವರು ಮತ್ತು ಪ್ರೌಢರನ್ನು ಕೂಡ ಬಾಧಿಸುತ್ತದೆ. ಈ ಹಿನ್ನಲೆಯಲ್ಲಿ ಮಕ್ಕಳಿಗೆ ಸಕಾಲದಲ್ಲಿ ದಡಾರ ಲಸಿಕೆ ಹಾಕಿಸುವ ಮೂಲಕ ಸೋಂಕು ತಡೆಯಲು ಕೈ ಜೋಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ಹೇಳಿದರು.

ಕುರುಗೋಡು ತಾಲ್ಲೂಕಿನ ಮುಷ್ಟಗಟ್ಟೆ ಗ್ರಾಮದಲ್ಲಿ ಮನೆ ಭೇಟಿ ಸಂದರ್ಭದಲ್ಲಿ ಮಾತನಾಡಿದ ಅವರು, ಮಗುವಿನ ವಯಸ್ಸಿನ ಅನುಗುಣವಾಗಿ ದಡಾರ ಲಸಿಕೆಯ ಮೊದಲು ಡೋಸನ್ನು 9-12 ತಿಂಗಳ ವಯಸ್ಸು ಮತ್ತು ಎರಡನೇ ಡೋಸನ್ನು 16-24 ತಿಂಗಳ ವಯಸ್ಸಿನಲ್ಲಿ ಹಾಕಿಸುವ ಮೂಲಕ ದಡಾರ ರೋಗವನ್ನು ನಿಯಂತ್ರಿಸಲು ಕೈ ಜೋಡಿಸಬೇಕು ಎಂದು ಅವರು ಕೋರಿದರು.

ಪ್ರಸ್ತುತ ಪ್ರಖರ ಬೇಸಿಗೆಯ ಹಿನ್ನಲೆಯಲ್ಲಿ ಮಕ್ಕಳಿಗೆ ಬೆವರುಸಾಲಿ ರೂಪದಲ್ಲಿಯೂ ಸಹ ಮೈಮೇಲೆ ಚಿಕ್ಕ ಚಿಕ್ಕ ಗುಳ್ಳೆಗಳು (ನುಚ್ಚುಗುಳ್ಳೆ) ಕಂಡುಬರುತ್ತವೆ. ಕೆಲವೊಮ್ಮೆ ಪಾಲಕರಿಗೆ ದಡಾರದ ಕುರಿತು ಗುರುತಿಸಲು ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಬೇಕು ಎಂದು ಸೂಚಿಸಿದರು.

ದಡಾರವು ಒಂದು ತೀವ್ರ ತರಹದ ಸೋಂಕು ರೋಗವಾಗಿದ್ದು, ಗಾಳಿಯ ಮೂಲಕ ಹರಡುತ್ತದೆ. ದಡಾರ ಲಸಿಕೆ ಹಾಕಿಸಿಕೊಳ್ಳದ ಅಥವಾ ಈ ಹಿಂದೆ ದಡಾರಕ್ಕೆ ತುತ್ತಾಗದವರಲ್ಲಿ ಈ ವೈರಾಣು ಸೋಂಕು ಉಂಟುಮಾಡುವ ಮೂಲಕ ದಡಾರಕ್ಕೆ ಕಾರಣವಾಗಬಹುದು ಎಂದರು.



ಮಕ್ಕಳ ಗುಂಪಿನಲ್ಲಿ ಇರಬಹುದಾದ ಸೋಂಕುಪೀಡಿತ ಮಗು ಒಂದು ಬಾರಿ ಸೀನಿದರೆ ಸಾಕು, ಗುಂಪಿನಲ್ಲಿರುವ ಇತರೆ ಮಕ್ಕಳಿಗೂ ದಡಾರ ಹರಡುತ್ತದೆ. ಈ ವೈರಾಣುವಿನ ಸಂಪರ್ಕಕ್ಕೆ ಬರುವ ರೋಗ ನಿರೋಧಕ ಶಕ್ತಿ ಹೊಂದಿರುವ ಯಾವುದೇ ಮಗು ದಡಾರಕ್ಕೆ ತುತ್ತಾಗುತ್ತದೆ, ದಡಾರ ಸೋಂಕಿಗೆ ಒಳಗಾಗಿರುವ ವ್ಯಕ್ತಿ ನಿಮ್ಮ ಹತ್ತಿರದಲ್ಲಿ ಸೀನಿದರೆ, ಕೆಮ್ಮಿದರೆ ಅಥವಾ ಕೇವಲ ನಿಮ್ಮ ಜತೆಗೆ ಮಾತನಾಡಿದರೆ ಕೂಡ ನಿಮಗೆ ದಡಾರ ಸೋಂಕು ಉಂಟಾಗಬಲ್ಲದು. ಒಂದು ವೇಳೆ ನಿರ್ಲಕ್ಷಿಸಿದರೆ ಮಗುವಿಗೆ ಅಪಾಯ ಎದುರಾಗಬಹುದಾಗಿದ್ದು, ಸಾರ್ವಜನಿಕರು ಲಸಿಕೆಯ ಜೊತೆಗೆ ಮಕ್ಕಳ ಶುಚಿತ್ವ ಹಾಗೂ ಪೌಷ್ಠಿಕ ಆಹಾರ ನೀಡುವುದಕ್ಕೆ ಆದ್ಯತೆ ನೀಡಬೇಕು ಎಂದು ತಿಳಿಸಿದರು.

**ದಡಾರ ಲಕ್ಷಣಗಳು:**

38.3 ಡಿಗ್ರಿ ಸೆಂಟಿಗ್ರೇಡ್ ಅಥವಾ ಅದಕ್ಕಿಂತ ಹೆಚ್ಚು ಜ್ವರ, ಕೆಮ್ಮು, ಮೂಗಿನಿಂದ ಸಿಂಬಳ ಸುರಿಯುವಂತಹ ಶೀತ ಅಥವಾ ಕಣ್ಣುಗಳು ಕೆಂಪಾಗುವುದು, ಜ್ವರ ಆರಂಭವಾಗಿ 3 ರಿಂದ 7 ದಿನಗಳ ಬಳಿಕ ಮೈಮೇಲೆ ಕೆಂಪನೆಯ ನೀರು ಸಹಿತ ಗುಳ್ಳೆಗಳು ಉಂಟಾಗುತ್ತದೆ. ಈ ಗುಳ್ಳೆಗಳು ಕಿವಿಗಳ ಹಿಂಭಾಗದಲ್ಲಿ ಉಂಟಾಗಲು ಆರಂಭವಾಗಿ ಬಳಿಕ ಮುಖಕ್ಕೆ ಹರಡುತ್ತವೆ, ಅನಂತರ ದೇಹವಿಡೀ ವ್ಯಾಪಿಸಿ ಕೈಗಳು ಮತ್ತು ಕಾಲುಗಳಿಗೂ ಹರಡುತ್ತವೆ.

ಪ್ರಸ್ತುತ ಎಲ್ಲಾ ತಾಲ್ಲೂಕು ಮಟ್ಟದ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ದಡಾರದೊಂದಿಗೆ ರುಬೆಲ್ಲಾ ರೋಗಕ್ಕೂ ಸಹಿತ ದಡಾರ ರುಬೆಲ್ಲಾ ಜಂಟಿ ಲಸಿಕೆಯನ್ನು ಹಾಕಲಾಗುತ್ತಿದ್ದು, ಪ್ರತಿ ಗುರುವಾರ ಗ್ರಾಮೀಣ ಭಾಗದ ಎಲ್ಲಾ ಹಳ್ಳಿಗಳಲ್ಲಿ ಹಾಗೂ ನಗರ ಪ್ರದೇಶದ ವಾರ್ಡ್ ಮಟ್ಟದಲ್ಲಿ ನಿಗಧಿಪಡಿಸಿ ಸ್ಥಳಗಳಲ್ಲಿ ಲಸಿಕೆಯನ್ನು ಉಚಿತವಾಗಿ ಹಾಕಲಾಗುತ್ತದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ವಿನಂತಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರಕುಮಾರ್, ವೈದ್ಯಾಧಿಕಾರಿಗಳಾದ ಡಾ.ಗುರು ಬಸವರಾಜ್, ಡಿಎನ್‌ಓ ಗಿರೀಶ್, ಆರೋಗ್ಯ ಮೇಲ್ವಿಚಾರಣಾಧಿಕಾರಿ ವಿರುಪಾಕ್ಷಿ ಸೇರಿದಂತೆ ಸಿಬ್ಬಂದಿಯವರು, ಆಶಾ ಕಾರ್ಯಕರ್ತೆಯರು ಹಾಜರಿದ್ದರು.



ಹೊಸಪೇಟೆಯಲ್ಲಿ ಶುಕ್ರವಾರ ಮಧ್ಯಾಹ್ನ ವರ್ಷದ ಮೊದಲ ಮಳೆ ಕೆಲ ಕ್ಷಣ ಸುರಿಯಿತು.

# ಮತ ಚಲಾವಣೆ, ಪ್ರತಿ ನಾಗರಿಕನ ನೈತಿಕ ಹೊಣೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರಭುದ್ಧ ರಾಷ್ಟ್ರ ನಿರ್ಮಾಣಕ್ಕಾಗಿ ಮತ ಚಲಾಯಿಸುವುದು ಪ್ರತಿಯೊಬ್ಬ ನಾಗರಿಕನ ನೈತಿಕ ಹೊಣೆಯಾಗಿದ್ದು, ಯಾವುದೇ ಕಾರಣಕ್ಕೂ ಮತದಾನ ಪ್ರಕ್ರಿಯೆಯಿಂದ ವಂಚಿತರಾಗಬಾರದು ಎಂದು ಸಂಡೂರು ತಾಲ್ಲೂಕು ಸ್ವೀಪ್ ಸಮಿತಿ ಅಧ್ಯಕ್ಷ ಹಾಗೂ ತಾಪಂ ಇಓ ಷಡಕ್ಷರಯ್ಯ ಅವರು ತಿಳಿಸಿದರು.

ಲೋಕಸಭೆ ಸಾರ್ವತ್ರಿಕ ಚುನಾವಣೆ ಅಂಗವಾಗಿ ಸಂಡೂರು ಪಟ್ಟಣದಲ್ಲಿ ಕಡಿಮೆ ಮತದಾನವಾಗಿರುವ ಮತಗಟ್ಟೆ ಸಂಖ್ಯೆ 50 ರಲ್ಲಿ ಸಂಡೂರು ತಾಲ್ಲೂಕು ಆಡಳಿತ ಮತ್ತು ತಾಲ್ಲೂಕು ಸ್ವೀಪ್ ಸಮಿತಿ, ಪುರಸಭೆ ಹಾಗೂ ಸಿಡಿಪಿಓ ಕಚೇರಿಯ ಸಹಯೋಗದಲ್ಲಿ ಶುಕ್ರವಾರ ಅಂಗನವಾಡಿ ಕಾರ್ಯಕರ್ತೆಯರಿಂದ ಹಮ್ಮಿಕೊಂಡಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವ ಗಟ್ಟಿಗೊಳಿಸಲು ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಬೇಕು ಮತ್ತು ಇತರರನ್ನು ಮತದಾನ ಮಾಡುವಂತೆ ಪ್ರೇರೇಪಿಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಡೂರು ಪುರಸಭೆ ಮುಖ್ಯಾಧಿಕಾರಿ ಜಯಣ್ಣ, ಸಿಡಿಪಿಓ ಎಳೆ ನಾಗಪ್ಪ, ಸಂಡೂರು ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ದುರುಗಪ್ಪ ಸೇರಿದಂತೆ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಮೇಲ್ವಿಚಾರಕರು




ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Follow for vijayanagara dist. updates

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ. ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

13-04-2024 – ಶನಿವಾರ

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೃಗಶಿರ |
| ಯೋಗ | : ಶೋಭನ |
| ಕರಣ | : ಬಾಳವ |
| ಸೂರ್ಯೋದಯ | : 06:09:04 |
| ಸೂರ್ಯಾಸ್ತ | : 18:45:54 |
| ರಾಹು | : 09:18–10:53 |
| ಯಮಘಂಡ | : 14:02–15:37 |
| ಗುಳಿಕ | : 06:09–07:44 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 12-04-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1579.02 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 172 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 4.011 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1577.32 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 278 ಕ್ಯುಸೆಕ್ |
| ಸಾಮರ್ಥ್ಯ | 3.306 ಟಿಎಂಸಿ |

# ಕಲಾವಿದರ ಮಾಸಾಶನ: ಜೀವಿತಾವಧಿ ಪ್ರಮಾಣ ಪತ್ರ ಸಲ್ಲಿಸಲು ಸೂಚನೆ

**ಹಂಪಿ ಟೈಮ್ಸ್ ಕೊಪ್ಪಳ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಈಗಾಗಲೇ ಮಾಸಾಶನ ಪಡೆಯುತ್ತಿರುವ ಕಲಾವಿದರು, ಸಾಹಿತಿಗಳು ಹಾಗೂ ಮೃತ ಸಾಹಿತಿ ಅಥವಾ ಕಲಾವಿದರು ಅವಲಂಭಿತರು ಜೀವಿತಾವಧಿ ಪ್ರಮಾಣ ಪತ್ರ ಸಲ್ಲಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಮಾಸಾಶನ ಪಡೆಯುತ್ತಿರುವ ಕಲಾವಿದರು, ಸಾಹಿತಿಗಳು ಹಾಗೂ ಮೃತ ಸಾಹಿತಿ ಅಥವಾ ಮೃತ ಕಲಾವಿದರಿಗೆ ಸಂಬಂಧಿಸಿದಂತೆ ವಿಧವಾ ಮಾಸಾಶನದಾರರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಜೀವಿತಾವಧಿ ಪ್ರಮಾಣ ಪತ್ರದ ನಿಗದಿತ ನಮೂನೆ ಪಡೆದು ತಾವು ಮಾಸಾಶನ ಪಡೆಯುತ್ತಿರುವ ಬ್ಯಾಂಕಿನ ವ್ಯವಸ್ಥಾಪಕರಿಂದ ಧೃಡಿಕರಿಸಿ ಪ್ರಮಾಣ ಪತ್ರದ ಪ್ರತಿಯನ್ನು ಹಾಗೂ ಮಾಸಾಶನದ ಆದೇಶ ಪ್ರತಿ, ಆಧಾರ್ ಕಾರ್ಡ್, ಮಾಸಾಶನ ಪಡೆಯುತ್ತಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿಗಳನ್ನು ತಮ್ಮ ಸಹಿಯೊಂದಿಗೆ ಧೃಡಿಕರಿಸಿ ಏಪ್ರಿಲ್ 30 ರೊಳಗಾಗಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

# ಕೊಪ್ಪಳ ಲೋಕಸಭೆ ಚುನಾವಣೆಗೆ ನಾಮಪತ್ರ ಸಲ್ಲಿಕೆ



ಕೊಪ್ಪಳ ಲೋಕಸಭಾ ಚುನಾವಣೆ-2024ರ ಸ್ಪರ್ಧಾಕಾಂಕ್ಷಿಯಾಗಿ ಭಾರತಿಯ ಜನತಾ ಪಾರ್ಟಿಯ ಅಭ್ಯರ್ಥಿಯಾಗಿ ಬಸವರಾಜ್ ಕ್ಯಾವಟರ್ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ನಲಿನ್ ಅತುಲ್ ಅವರಿಗೆ ಶುಕ್ರವಾರ ನಾಮ ಪತ್ರ ಸಲ್ಲಿಸಿದರು.



ಕೊಪ್ಪಳ ಲೋಕಸಭಾ ಚುನಾವಣೆ-2024ರ ಸ್ಪರ್ಧಾಕಾಂಕ್ಷಿಯಾಗಿ ಭಾರತಿಯ ರಾಷ್ಟ್ರೀಯ ಕಾಂಗ್ರೆಸ್ (ಐ) ಪಕ್ಷದ ಅಭ್ಯರ್ಥಿಯಾಗಿ ರಾಜಶೇಖರ ಕುಯ್ಯಪ್ಪನರ ಅವರು ಜಿಲ್ಲಾ ಚುನಾವಣಾಧಿಕಾರಿಗಳಾದ ನಲಿನ್ ಅತುಲ್ ಅವರಿಗೆ ಶುಕ್ರವಾರ ನಾಮ ಪತ್ರ ಸಲ್ಲಿಸಿದರು.

# ಕೊಪ್ಪಳ ಅಬಕಾರಿ ಇಲಾಖೆಯಿಂದ 51.85 ಲಕ್ಷ ಮೌಲ್ಯದ ವಸ್ತುಗಳ ಜಪ್ತಿ

■ **ಹಂಪಿ ಟೈಮ್ಸ್ ಕೊಪ್ಪಳ**

ಲೋಕಸಭಾ ಚುನಾವಣೆ-2024 ರ ಸಂಬಂಧ ನೀತಿ ಸಂಹಿತೆ ಜಾರಿಯಾದ ಮಾರ್ಚ್ 16 ರಿಂದ ಏಪ್ರಿಲ್ 11 ರವರೆಗೆ ಜಿಲ್ಲಾ ಅಬಕಾರಿ ಇಲಾಖೆಯಿಂದ ಒಟ್ಟು ರೂ. 51,85,953 ರೂ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಅಬಕಾರಿ ಉಪ ಆಯುಕ್ತರಾದ ಬಿ.ಆರ್.ಹಿರೇಮಠ್ ಅವರು ತಿಳಿಸಿದ್ದಾರೆ.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮಾರ್ಚ್ 16 ರಿಂದ ಏ.11 ರವರೆಗೆ ಜಿಲ್ಲಾ ಅಬಕಾರಿ ಇಲಾಖೆಯಿಂದ ಒಟ್ಟು 224 ದಾಳಿಗಳನ್ನು ನಡೆಸಲಾಗಿದ್ದು, 167 ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ 147 ಜನರನ್ನು ಬಂಧಿಸಲಾಗಿದೆ. ಪ್ರಕರಣಗಳಲ್ಲಿ 4306 ಲೀ. ಮದ್ಯದ ಜೊತೆಗೆ 1 ಲಾರಿ, 1 ಒಮಿನಿ ವ್ಯಾನ್ ಹಾಗೂ 25 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದ್ದು, ಜಪ್ತಿ ಮಾಡಲಾದ ವಸ್ತುಗಳ ಒಟ್ಟು ಮೌಲ್ಯ ರೂ. 51,85,953 ಆಗಿದ್ದು, ಚುನಾವಣಾ ಅಕ್ರಮ ತಡೆಯುವ ಹಿನ್ನೆಲೆಯಲ್ಲಿ ಇಲಾಖೆಯ ಅಧಿಕಾರಿ, ಸಿಬ್ಬಂದಿ ನಿರಂತರ ಕಾರ್ಯಪ್ರವೃತ್ತರಾಗಿದ್ದಾರೆ ಎಂದು ಅಬಕಾರಿ ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA